## ತೋಟಗಾರಿಕೆ ಇಲಾಖೆ

# ತೋಟಗಾರಿಕೆ ಉಪನಿರ್ದೇಶಕರ ಕಛೇರಿ

# (ಜಿಲ್ಲಾ ಪಂಚಾಯತ್), ದಾವಣಗೆರೆ

# ಮಾಹಿತಿ ಹಕ್ಕು ಅಧಿನಿಯಮ–2005 ಪ್ರಕರಣ

# 4 (1) (ಬಿ)ಅಡಿಯಲ್ಲಿ ಮಾಹಿತಿ ಪ್ರಕಟಣೆ

# 2016–17

# "ಸಾರ್ವಜನಿಕ ಮಾಹಿತಿಗಾಗಿ"

**ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ**

# "ಸಾರ್ವಜನಿಕ ಮಾಹಿತಿಗೆ ಪ್ರಕಟಣೆ"

# 2016–17

# ಮಾಹಿತಿ ಹಕ್ಕು ಅಧಿನಿಯಮ, 2005 ಪ್ರಕರಣ 4 (1) (ಬಿ) ಅಡಿಯಲ್ಲಿ ಮಾಹಿತಿ ಪ್ರಕಟಣೆ

## ಜಿಲ್ಲೆಯ ಸಂಕ್ಷಿಪ್ತ ಮಾಹಿತಿ

**1)** ರಾಜಧಾನಿಯಿಂದ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ದಾವಣಗೆರೆ ಕಛೇರಿಗೆ ಇರುವ ದೂರ: **268** ಕಿ.ಮೀ

ದಾವಣಗೆರೆ ಜಿಲ್ಲೆಯು ದಿನಾಂಕ:15–08–1997 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 6 ತಾಲ್ಲೂಕುಗಳಾದ ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ಮತ್ತು ಜಗಳೂರು ಒಳಗೊಂಡಿರುತ್ತದೆ. ಚಿತ್ರದುರ್ಗ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಪ್ರತ್ಯೇಖಿಸಿ ದಾವಣಗೆರೆ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿರುತ್ತದೆ. ಜಿಲ್ಲೆಯು ರಾಜ್ಯದ ಮಧ್ಯಭಾಗದಲ್ಲಿದ್ದು, 5.97 ಲಕ್ಷ ಹೆ. ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುತ್ತದೆ. ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಸಾಗುವಳಿ ವಿಸ್ತೀರ್ಣ 3.85 ಲಕ್ಷ ಹೆಕ್ಟೇರ್ ಇದ್ದು, ಇದರಲ್ಲಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಅಂದಾಜು 64 ಸಾವಿರ ಹೆಕ್ಟೇರ್‌ಗಳಷ್ಟಿದ್ದು, ಇದು ಸಾಗುವಳಿ ವಿಸ್ತೀರ್ಣದ ಶೇ.16.62 ರಷ್ಟಾಗಿರುತ್ತದೆ. ಒಟ್ಟು ತೋಟಗಾರಿಕೆ ಬೆಳೆಗಳ ಉತ್ಪಾದನೆ 3.37 ಲಕ್ಷ ಟನ್‌ಗಳಷ್ಟಿರುತ್ತದೆ.



ಜಿಲ್ಲೆಯು ಒಟ್ಟು 24 ಹೋಬಳಿ, 230 ಗ್ರಾಮ ಪಂಚಾಯಿತಿ ಹಾಗೂ 810 ಜನವಸತಿಯಿರುವ ಗ್ರಾಮಗಳು ಮತ್ತು 113 ಜನವಸತಿ ಇಲ್ಲದಿರುವ ಗ್ರಾಮಗಳನ್ನು ಒಳಗೊಂಡಿರುತ್ತದೆ. ಜಿಲ್ಲೆಯ ಕೇಂದ್ರಸ್ಥಾನವು ಮಹಾನಗರಪಾಲಿಕೆಯಾಗಿದ್ದು, 4 ಪಟ್ಟಣ ಪಂಚಾಯಿತಿಗಳನ್ನು ಒಳಗೊಂಡಿರುತ್ತದೆ. 2001ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ 17.90952 ಲಕ್ಷಗಳಷ್ಟಿದ್ದು, ಇದರಲ್ಲಿ 12.47954 ಲಕ್ಷಗಳಷ್ಟು ಗ್ರಾಮೀಣ ಪ್ರದೇಶದವರಾಗಿದ್ದು, 5.42998 ಲಕ್ಷಗಳಷ್ಟು ನಗರ/ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಒಟ್ಟು ಅಕ್ಷರಸ್ಥರ ಸಂಖ್ಯೆಯು 10.45620 ಲಕ್ಷವಿದ್ದು, ಇದರಲ್ಲಿ 6.06552 ಲಕ್ಷ ಗಂಡಸರು, 4.39068 ಲಕ್ಷ ಹೆಂಗಸರಾಗಿದ್ದು, ಶೇಕಡವಾರು ಸಾಕ್ಷರತೆ ಪ್ರಮಾಣ 67.4 ರಷ್ಟಿರುತ್ತದೆ.

ಜಿಲ್ಲೆಯಲ್ಲಿ ಒಟ್ಟು 2.19988 ಲಕ್ಷ ಕೃಷಿ ಸಾಗುವಳಿದಾರರಿದ್ದು, 1.70138 ಲಕ್ಷ ಕೃಷಿ ಕಾರ್ಮಿಕರು ಇರುವುದಾಗಿ ಜಿಲ್ಲೆಯ ಅಂಕಿ-ಅಂಶಗಳ ನೋಟದಿಂದ ತಿಳಿದುಬಂದಿರುತ್ತದೆ.

**2) ಮಣ್ಣು ಮತ್ತು ಹವಮಾನದ ವಿವರಗಳು:-**

ಮಣ್ಣು ಮತ್ತು ನೀರು ಎರಡು ಮೂಲಭೂತ ಅಂಶಗಳ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ನಿರ್ಧರಿಸುತ್ತವೆ. ಜಿಲ್ಲೆಯು ಕಪ್ಪು ಮತ್ತು ಕೆಂಪು ಮಣ್ಣುಗಳಿಂದ ಕೂಡಿದ್ದು, ಮಧ್ಯಮ ಆಳವನ್ನು ಹೊಂದಿವೆ.

ದಾವಣಗೆರೆಯು ಜಿಲ್ಲೆಯ 14-18$^0$ ಉತ್ತರ ಅಕ್ಷಾಂಶ ಹಾಗೂ 75-5$^0$ ರೇಖಾಂಶದಲ್ಲಿದ್ದು ಸಮುದ್ರ ಮಟ್ಟದಿಂದ 1928 ಅಡಿ ಎತ್ತರದಲ್ಲಿರುತ್ತದೆ. ಸರಾಸರಿ 644 mm ಮಳೆಯು ಆಗುತ್ತಿದ್ದು, ಶೇ.80-85 ಭಾಗ ನೈರುತ್ಯ ಮಾನ್‌ಸೂನ್‌ನಿಂದಾಗುತ್ತದೆ.

**3) ನೀರಾವರಿ ಸೌಲಭ್ಯ:-**

ಆರು ತಾಲ್ಲೂಕುಗಳಲ್ಲಿ 4 ತಾಲ್ಲೂಕುಗಳು ಅಂದರೆ ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳಲ್ಲಿ ಕಾಲುವೆ ನೀರಾವರಿ ಸೌಲಭ್ಯವಿರುತ್ತದೆ. ಹರಪನಹಳ್ಳಿ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ಕೊಳವೆ ಬಾವಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತಾರೆ.

**4) ಮೂಲಭೂತ ಸೌಕರ್ಯಗಳು:-**

1. ಮಾರುಕಟ್ಟೆ:- ಹರಪನಹಳ್ಳಿ ಹೊರತುಪಡಿಸಿ ಎಲ್ಲಾ ತಾಲ್ಲೂಕುಗಳಲ್ಲಿ ಮಾರುಕಟ್ಟೆ ಅನುಕೂಲತೆ ಇದೆ.

| **ತಾಲ್ಲೂಕು** | **ಮಾರುಕಟ್ಟೆ** |
|---|---|
| 1. ದಾವಣಗೆರೆ | APMC |
| 2. ಹೊನ್ನಾಳಿ | APMC ಮತ್ತು Sub APMC –ನ್ಯಾಮತಿ |
| 3. ಚನ್ನಗಿರಿ | APMC and TUMCOS |
| 4. ಜಗಳೂರು | APMC |
| 5. ಹರಿಹರ | APMC |

2. ಶೀತಲ ಗೃಹಗಳು:- ಜಿಲ್ಲೆಯಲ್ಲಿ ಈ ಅನುಕೂಲತೆಗಳು ಇರುವುದಿಲ್ಲ

3. ಸಂಸ್ಕರಣ ಘಟಕಗಳು:- 2 ಸಂಸ್ಕರಣ ಘಟಕಗಳಿವೆ

1. ಗ್ರೀನ್ ಆಗ್ರೋ ಪ್ಯಾಕ್ ಲಿಮಿಟೆಡ್, ಹೆಬ್ಬಾಳ, ದಾವಣಗೆರೆ ತಾ॥

2. ಸ್ಟೇರ್ಲಿಂಗ್ ಆಗ್ರೋ ಫ್ರೂಟ್ಸ್ ಲಿಮಿಟೆಡ್, ದೊಡ್ಡಬಾತಿ, ದಾವಣಗೆರೆ ತಾ॥

4. ಗೋದಾಮುಗಳು:- ಭಾರತೀಯ ಆಹಾರ ನಿಗಮದ ಗೋದಾವುಗಳು ಮಾತ್ರ ಎಲ್ಲಾ ತಾಲ್ಲೂಕುಗಳಲ್ಲಿವೆ. ಬೇರೆ ರೀತಯ ಗೋದಾಮುಗಳು ಇರುವುದಿಲ್ಲ.

5. ತರಬೇತಿ ಕೇಂದ್ರಗಳು:- ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ, ಮತ್ತು ತರಳಬಾವು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಈ ಕೆಂದ್ರಗಳು ಜಿಲ್ಲೆಯಲ್ಲಿ ಕೃಷಿಕರಿಗೆ ತರಬೇತಿ ನೀಡುತ್ತವೆ.

6. ವಿದ್ಯುತ್ ಶಕ್ತಿ ಅನುಕೂಲತೆಗಳು:- ಪ್ರಸ್ತುತ ಇರುವ ವಿದ್ಯುತ್ ಶಕ್ತಿ ಬೇಡಿಕೆಯಿರುವಷ್ಟು ವಿದ್ಯುತ್ ಪೂರೈಕೆ ಆಗುತ್ತಿಲ್ಲ.

7. ಸಾರಿಗೆ ವ್ಯವಸ್ಥೆ:- ಜಿಲ್ಲೆಯು ಒಳ್ಳೆಯ ಸಾರಿಗೆ ವ್ಯವಸ್ಥೆ ಹೊಂದಿದ್ದು, ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕ ಹೊಂದಿದೆ.

8. ಕೃಷಿ ಕಾರ್ಮಿಕರ ಲಭ್ಯತೆ:- ಕೃಷಿ ಕಾರ್ಮಿಕರ ಲಭ್ಯತೆ ತೃಪ್ತಿಕರವಾಗಿರುವುದಿಲ್ಲ.

9. ಸಂಪರ್ಕಜಾಲ:- ತೃಪ್ತಿಕರವಾಗಿದೆ.

10. ನೀರಾವರಿ ಮೂಲಗಳು:- 6 ತಾಲ್ಲೂಕುಗಳಲ್ಲಿ ದಾವಣಗೆರೆ, ಹರಿಹರ, ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳಲ್ಲಿ ಭದ್ರಾ ನದಿ ಮೂಲದ ಸೌಲಭ್ಯಗಳನ್ನೊಂಡಿವೆ

## 5) SWOT ವಿಶ್ಲೇಷಣೆ :-

**ಸಾಮಾರ್ಥ್ಯ:-** ದಾವಣಗೆರೆ ಜಿಲ್ಲೆಯು 14-18$^0$ ರೇಖಾಂಶದಲ್ಲಿರುತ್ತದೆ. ಉಷ್ಣವಲಯದ ಏರಿಡ್ ಜೋನ್ ಆಗಿದ್ದು, ಮಾವು, ಸಪೋಟ, ಬಾಳೆ, ಪಪ್ಪಾಯ, ಇತ್ಯಾದಿ ಬೆಳೆಗಳಿಗೆ ಸೂಕ್ತವಾಗಿರುತ್ತದೆ. ಈ ಬೆಳೆಗಳು ಚನ್ನಗಿರಿ, ಹರಪನಹಳ್ಳಿ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ.

6 ತಾಲ್ಲೂಕುಗಳಲ್ಲಿ 4 ತಾಲ್ಲೂಕುಗಳು ದಾವಣಗೆರೆ, ಹರಿಹರ, ಚನ್ನಗಿರಿ ಮತ್ತು ಹೊನ್ನಾಳಿ ಕಾಲುವೆ, ನೀರಾವರಿ ವ್ಯವಸ್ಥೆ ಇರುತ್ತದೆ.

ಮಾರುಕಟ್ಟೆ, ಸಾರಿಗೆ ಸಂಪರ್ಕ ವ್ಯವಸ್ಥೆಗಳು ಚೆನ್ನಾಗಿದ್ದು, ಜಿಲ್ಲೆಯು ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕ ಹೊಂದಿದೆ.

**ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ**

**ದೌರ್ಬಲ್ಯ:-** ದಾವಣಗೆರೆ ಜಿಲ್ಲೆಯಲ್ಲಿ ಸರಾಸರಿ 644mm ಮಳೆಯಾಗುತ್ತದೆ. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ net sown area (NSA) ಶೇ.38 ಭಾಗ ಮಾತ್ರ ನೀರಾವರಿ ಸೌಲಭ್ಯ ಹೊಂದಿದ್ದು, 62% ಮಳೆಯಾಶ್ರಿತವಾಗಿರುತ್ತದೆ.

**ಅವಕಾಶಗಳು:-** ಭೌಗೋಳಿಕವಾಗಿ ಜಿಲ್ಲೆಯು ತೋಟಗಾರಿಕೆಗೆ ಸೂಕ್ತವಾಗಿದೆ. ರೈತರೂ ಸಹ ತೋಟಗಾರಿಕೆಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ವಿಶೇಷವಾಗಿ ದಾಳಿಂಬೆ, ಸಪೋಟ, ಮಾವು, ಬಾಳೆ ಮತ್ತು ಪಪ್ಪಾಯ ಬೆಳೆಗಳ ಪ್ರದೇಶ ವಿಸ್ತರಣೆಗೆ ಅವಕಾಶವಿದೆ.

ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದು ಮತ್ತು ಸಂಸ್ಕರಣ ಘಟಕಗಳನ್ನು ಸ್ಥಾಪಿಸುವುದು. ಇದರಿಂದ ಉದ್ಯೋಗಗಳನ್ನು ಸೃಷ್ಟಿಸಬಹುದಾಗಿದೆ. ಪೇಪಾಯಿನ್ ಸಂಸ್ಕರಣೆ, ಗರ್ಕಿನ ರಫ್ತು ಮಾಡುವುದು, ಚೆಂಡು ಹೂವಿನಿಮದ ಬಣ್ಣ ತೆಗೆಯುವುದು. ಇಂತಹ ಉದ್ಯಮಗಳನ್ನು ಲಾಭದಾಯಕವಾಗಿ ಮಾಡಬಹುದಾಗಿದೆ.

**ಸವಾಲುಗಳು:-** ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಶೇ.62 ರಷ್ಟು ಮಳೆಯಾಶ್ರಿತವಾಗಿರುತ್ತದೆ. ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಅಂತರ್ಜಲ ಪ್ರಮಾಣ ಕುಸಿಯುತ್ತದೆ. ಮುಂದೆ ಭೂಮಿ ಬಂಜರಾಗುವ ಸಾಧ್ಯತೆಗಳಿವೆ.

**6) ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆಯ ವಿವರಗಳು**

- **ಒಟ್ಟು ಭೌಗೋಳಿಕ ವಿಸ್ತೀರ್ಣ :- 5.97 ಲಕ್ಷ ಹೆಕ್ಟೇರ್**
- **ಒಟ್ಟು ವ್ಯವಸಾಯಕ್ಕೆ ಯೋಗ್ಯ ಭೂಮಿ :- 3.85 ಲಕ್ಷ ಹೆಕ್ಟೇರ್**
- **ಕೃಷಿ ಬೆಳೆಗಳ ವಿಸ್ತೀರ್ಣ :- 3.18 ಲಕ್ಷ ಹೆಕ್ಟೇರ್**
- **ತೋಟಗಾರಿಕೆ ಬೆಳೆಗಳ ವಿಸ್ತೀರ್ಣ :- 64000 ಹೆಕ್ಟೇರ್**
- **ತಾಲ್ಲೂಕು :- 6**
- **ವಾಡಿಕೆ ಮಳೆ (ಸರಾಸರಿ) :- 644 ಮಿ.ಮೀ**
- **ಸಾಮಾನ್ಯ ಉಷ್ಣಾಂಶ :- 16-42 ಸೆಂ ಗ್ರೇಡ್**

ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಅಂದಾಜು 64 ಸಾವಿರ ಹೆಕ್ಟೇರ್‌ಗಳಷ್ಟಿದ್ದು, ಇದು ಸಾಗುವಳಿ ವಿಸ್ತೀರ್ಣದ ಶೇ.16.62ರಷ್ಟಾಗಿರುತ್ತದೆ.

| ಕ್ರ.ನಂ | ಬೆಳೆಗಳು | ವಿಸ್ತೀರ್ಣ (ಹೆಕ್ಟೇರ್) | ಉತ್ಪಾದನೆ (ಟನ್) | ಇಳುವರಿ (ಟನ್/ಹೆಕ್ಟೇರ್) | ಮೌಲ್ಯ (ರೂ.ಲಕ್ಷ) |
|---|---|---|---|---|---|
| 1 | ಹಣ್ಣಿನ ಬೆಳೆಗಳು | 6124.48 | 111118.0 | 114.29 | 12801.92 |
| 2 | ತರಕಾರಿ ಬೆಳೆಗಳು | 10036.37 | 174542.00 | 17.39 | 8431.63 |
| 3 | ಸಾಂಬಾರು ಬೆಳೆಗಳು | 211.60 | 762.00 | 3.60 | 184.91 |
| 4 | ತೋಟದ ಬೆಳೆಗಳು | 46020.2 | 43160.4 | 0.94 | 46341.4 |
| 5 | ವಾಣಿಜ್ಯ ಪುಷ್ಪಗಳು | 845.31 | 7297.71 | 8.63 | 1064.34 |
| | ಒಟ್ಟು | 63237.99 | 336880.11 | 5.33 | 68824.2 |

## ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ

### ತಾಲ್ಲೂಕವಾರು ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆ :

| ಕ್ರ.ಸಂ | ತಾಲ್ಲೂಕು | ವಿಸ್ತೀರ್ಣ (ಹೆಕ್ಟೇರ್) | ಉತ್ಪಾದನೆ (ಟನ್) | ಇಳುವರಿ (ಟನ್/ಹೆಕ್ಟೇರ್) | ಮೌಲ್ಯ (ರೂ.ಲಕ್ಷ) |
|---|---|---|---|---|---|
| 1 | ಚನ್ನಗಿರಿ | **23852.67** | **63141.03** | **2.65** | **25961.08** |
| 2 | ದಾವಣಗೆರೆ | **11018.69** | **30431.92** | **2.76** | **11380.15** |
| 3 | ಹರಪನಹಳ್ಳಿ | **7376.00** | **90707.70** | **12.30** | **7684.94** |
| 4 | ಹರಿಹರ | **7976.23** | **20569.02** | **2.58** | **8670.05** |
| 5 | ಹೊನ್ನಾಳಿ | **9328.00** | **73689.60** | **7.90** | **12892.73** |
| 6 | ಜಗಳೂರು | **3686.40** | **58341.08** | **15.83** | **2235.24** |
| | ಒಟ್ಟು | **63237.99** | **336880.35** | **5.33** | **68824.20** |

### 7) ಜಿಲ್ಲೆಯಲ್ಲಿರುವ ತೋಟಗಾರಿಕಾ ಕ್ಷೇತ್ರ/ ಸಸ್ಯಾಗಾರಗಳ ಮಾಹಿತಿ:

| ಕ್ರ. ಸಂ. | ಜಿಲ್ಲೆ/ ತಾಲ್ಲೂಕಿನ ಹೆಸರು | ತೋಟಗಾರಿಕೆ ಕ್ಷೇತ್ರ/ಸಸ್ಯಗಾರದ ಹೆಸರು | ಸ್ಥಾಪನೆ ಯಾದ ವರ್ಷ | ಒಟ್ಟು ವಿಸ್ತೀರ್ಣ (ಎ.ಗಳಲ್ಲಿ) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಎ.ಗಳಲ್ಲಿ) | ಅಭಿವೃದ್ಧಿ ಪಡಿಸಬೇಕಾದ ವಿಸ್ತೀರ್ಣ (ಎ.ಗಳಲ್ಲಿ) | ಮೂಲಭೂತ ಸೌಕರ್ಯವಿರುವ ವಿವರಗಳು | ಪ್ರಸ್ತುತ ಸಸ್ಯ ಸಂಪತ್ತಿನ ವಿವರ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | **ದಾವಣಗೆರೆ** | ಆವರಗೊಳ್ಳ ಕ್ಷೇತ್ರ | 1976 | 48.28 | 20.00 | 28.28 | ಕೊಳವೆಬಾವಿ-1, ಕಛೇರಿ ಕಟ್ಟಡ-1, ಪಂಪ್ ಸೆಟ್-1, ಮುಳ್ಳುತಂತಿಬೇಲಿ ಹಸಿರುಮನೆ-2, ನೀರು ಸಂಗ್ರಹ ತೊಟ್ಟಿ, ಎರೆಹುಳು ಘಟಕ-1 | ಮಾವು-55 ಸಪೋಟ-50, ತೆಂಗು-25, |
| 2 | **ಹರಿಹರ** | ಬುಳ್ಳಪುರ ಕ್ಷೇತ್ರ | 1971 | 10 | 8 | 2 | ದಾಸ್ತಾನು ಕೊಠಡಿ/ ಕಛೇರಿ ಕಟ್ಟಡ-1 ಕೊಳವೆಬಾವಿ-2 (ನೀರಿಲ್ಲ), ಪಂಪ್‌ಸೆಟ್, ಮುಳ್ಳುತಂತಿಬೇಲಿ | ಸಪೋಟ-106, ತೆಂಗು-61, |
| 3 | **ಚನ್ನಗಿರಿ** | ಗರಗ ಕ್ಷೇತ್ರ | 1968 | 75 | 25 | 50 | ಕೊಳವೆಬಾವಿ-2, ಉಗ್ರಾಣ/ಫಾರಂ ಕಛೇರಿ ಕಟ್ಟಡ-4 ತಂತಿಬೇಲಿ, ಹಸಿರುಮನೆ-1, ನೀರು ಸಂಗ್ರಹಣ ತೊಟ್ಟಿ | ಸಪೋಟ-445, ಮಾವು-308, ತೆಂಗು-15 |
| 4 | **ಹರಪನಹಳ್ಳಿ** | ಕೆ.ಕಲ್ಲಹಳ್ಳಿ ಕ್ಷೇತ್ರ | 1985 | 57.19 | 40 | 17.19 | ಉಗ್ರಾಣ-1, ದನದ ಕೊಟ್ಟಿಗೆ, ಪಂಪ್‌ಸೆಟ್, ತೆರೆದಬಾವಿ(ನೀರಿಲ್ಲ) , ಕೊಳವೆಬಾವಿ-1 | ಸಪೋಟ-38 ಮಾವು-40 |
| 5 | **ಜಗಳೂರು** | ವ್ಯಾಸಗೊಂಡನ ಹಳ್ಳಿ ಕ್ಷೇತ್ರ | 1971 | 21.36 | 12 | 9.36 | ಕಛೇರಿ ಕಟ್ಟಡ, ಕೊಳವೆಬಾವಿ-1, ಮುಳ್ಳುತಂತಿ, ನೀರಿನ ತೊಟ್ಟಿ-1 ತೆರೆದಬಾವಿ(ನೀರಿಲ್ಲ) | ಸಪೋಟ-210, ಸೀಬೆ-102,ಮಾವು-23 |

## ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ

| ಕ್ರ. ಸಂ. | ಜಿಲ್ಲೆ/ ತಾಲ್ಲೂಕಿನ ಹೆಸರು | ತೋಟಗಾರಿಕೆ ಕ್ಷೇತ್ರ/ಸಸ್ಯಗಾರದ ಹೆಸರು | ಸ್ಥಾಪನೆ ಯಾದ ವರ್ಷ | ಒಟ್ಟು ವಿಸ್ತೀರ್ಣ (ಎ.ಗಳಲ್ಲಿ) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಎ.ಗಳಲ್ಲಿ) | ಅಭಿವೃದ್ಧಿ ಪಡಿಸಬೇಕಾದ ವಿಸ್ತೀರ್ಣ (ಎ.ಗಳಲ್ಲಿ) | ಮೂಲಭೂತ ಸೌಕರ್ಯವಿರುವ ವಿವರಗಳು | ಪ್ರಸ್ತುತ ಸಸ್ಯ ಸಂಪತ್ತಿನ ವಿವರ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 6 | ಹೊನ್ನಾಳಿ | ಬೇಲಿಮಲ್ಲೂರು ಕ್ಷೇತ್ರ | 1965 | 124.10 | 60 | 64.10 | ಶೇಟ್‌ನೆಟ್ ಪೆಂಡಾಲ್–1, ಪಾಲಿಹೌಸ್–4, ಬೋರ್‌ವೆಲ್–7, ಪ್ರಯೋಗಾಲಯ ಕಟ್ಟಡ, ಪಂಪ್‌ಹೌಸ್–1, ಗೋದಾಮು–1, ತಂತಿಬೇಲಿ, ನೀರಿನ ತೊಟ್ಟಿ–2 | ಸಪೋಟ–630 ಮಾವು–215 ತೆಂಗು–100, ಹುಣಸೆ–55 ನೆಲ್ಲಿ–350, ಕರಿಬೇವು–35, ದೊಡ್ಡನೇರಳೆ–100, ಪೇರಲ–10, ಹಲಸು–5 |
| 7 | ದಾವಣಗೆರೆ | ಆರ್.ಎಂ.ಸಿ. ಕ್ಷೇತ್ರ | 1968 | 12.12 | 12.12 | - | ಕಛೇರಿ ಕಟ್ಟಡ/ದಾಸ್ತಾನು ಕೊಠಡಿ–1, ಪಂಪ್‌ಹೌಸ್–1, ತೆರೆದ ಬಾವಿ–1, ಪಂಪ್‌ಸೆಟ್–2, ಚೈನ್ ಲಿಂಕ್ ಬೇಲಿ, ನೆರಳು ಚಪ್ಪರ, ಪಾಲಿಹೌಸ್–2, ಎರೆಹುಳು ಘಟಕ–1 | ಸಪೋಟ–175, ತೆಂಗು–50 |
| 8 | ದಾವಣಗೆರೆ | ಕಛೇರಿ ನರ್ಸರಿ | 1967 | 3.00 | 3.00 | - | ಕಛೇರಿ ಕಟ್ಟಡ–3 ಪ್ರಯೋಗ ಶಾಲೆ–1, ಪಾಲಿಹೌಸ್–1, ಕೊಳವೆ ಬಾವಿ–1, ಸಬ್ ಮರ್ಸಿಬಲ್ ಪಂಪ್–1, ಪಂಪ್ ಹೌಸ್–1, ಕ್ಯಾಟಲ್ ಗಾರ್ಡ್1, ನೀರಿನ ತೊಟ್ಟಿ–1, ದಾಸ್ತಾನು ಕೊಠಡಿ–1, ಎರೆಹುಳು ತೊಟ್ಟಿ–1, ಹಾಪ್‌ಕಾಮ್ಸ್ ಮಳಿಗೆ–1 | ಸಪೋಟ–10, ತೆಂಗು–100 |

**ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ**

## ತೋಟಗಾರಿಕಾ ಉಪ ನಿರ್ದೇಶಕರು ಜಿಲ್ಲಾ ಪಂಚಾಯತ್, ದಾವಣಗೆರೆ ಜಿಲ್ಲೆ ಕಛೇರಿಯ ಕಾರ್ಯ ಸಂಘಟನೆಯ ಪಟ್ಟಿ.

ತೋಟಗಾರಿಕೆ ಉಪ ನಿರ್ದೇಶಕರು

↓

ಕೇಂದ್ರಸ್ಥಾನ ಸಹಾಯಕರು, ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾ.ತೋ.ಮಿ)

↓

| ↓ | ↓ |
|---|---|
| ತಾಂತ್ರಿಕ ಸಹಾಯಕರು-1, ತಾಂತ್ರಿಕ ಸಹಾಯಕರು-2 | ಅಧೀಕ್ಷಕರು |
| | ↓ |
| | ಪ್ರಥಮ ದರ್ಜೆ ಸಹಾಯಕರು |
| | ↓ |
| | ದ್ವಿತೀಯ ದರ್ಜೆ ಸಹಾಯಕರು |
| | ↓ |
| | ಬೆರಳಚ್ಚುಗಾರರು |
| | ↓ |
| | ವಾಹನ ಚಾಲಕರು |
| | ↓ |
| | ಸೇವಕರು |

ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 6 ತಾಲ್ಲೂಕುಗಳಿದ್ದು, ಅವುಗಳಲ್ಲಿ ದಾವಣಗೆರೆ, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ತಾಲ್ಲೂಕುಗಳಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಜಗಳೂರು ಮತ್ತು ಹರಿಹರ ತಾಲೂಕುಗಳಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರು ಮುಖ್ಯಸ್ಥರು ಆಗಿರುತ್ತಾರೆ. ಈ ಎಲ್ಲಾ ತಾಲ್ಲೂಕು ಕಛೇರಿಗಳು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯುಲ್ಲಿ ಬರುತ್ತವೆ.

ಸಹಾಯಕ ತೊಟಗಾರಿಕೆ ನಿರ್ದೇಶಕರು ರಾಜ್ಯ ವಲಯ, ದಾವಣಗೆರೆರವರು ರಾಜ್ಯವಲಯ ಅಧೀನ ಬರುವ 2 (ಬೇಲಿಮಲ್ಲೂರು ಮತ್ತು ಆರ್.ಎಂ.ಸಿ.) ತೋಟಗಾರಿಕೆ ಕ್ಷೇತ್ರಗಳು ಹಾಗೂ 4 (ದಾವಣಗೆರೆ, ಹೊನ್ನಾಳಿ, ಜಗಳೂರು, ಹರಪನಹಳ್ಳಿ) ಕಛೇರಿ ನರ್ಸರಿಗಳನ್ನು ನಿರ್ವಹಿಸುವ ಉಸ್ತುವಾರಿ ಹೊಂದಿರುತ್ತಾರೆ.

ತೋಟಗಾರಿಕೆ ಉಪನಿರ್ದೇಶಕರ ಕಛೇರಿಯು ಈ ಮೇಲ್ಕಾಣಿಸಿದ ಎಲ್ಲಾ ಕಛೇರಿಗಳ ಮೇಲು ಉಸ್ತುವಾರಿ ನಿರ್ವಹಿಸುತ್ತದೆ. ಪ್ರಸ್ತುತ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯಲ್ಲಿ ತೋಟಗಾರಿಕೆ ಉಪ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಒಬ್ಬ ಕೇಂದ್ರ ಕಛೇರಿ ಸಹಾಯಕರು, ಒಬ್ಬ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ತೋ.ಮಿ), ಒಬ್ಬ ಸಹಾಯಕ ತೋಟಗಾರಿಕೆ ಅಧಿಕಾರಿ, ಒಬ್ಬ ಅಧೀಕ್ಷಕರು, ಒಬ್ಬ ಪ್ರಥಮ ದರ್ಜೆ ಸಹಾಯಕರು, ಒಬ್ಬ ದ್ವಿತೀಯ ದರ್ಜೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದು, ಬೆರಳಚ್ಚುಗಾರರು, ವಾಹನ ಚಾಲಕ ಹಾಗೂ ಸೇವಕ ಹುದ್ದೆ ಖಾಲಿ ಇರುತ್ತದೆ.

**4 (I) (ಬಿ)–(I) ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು**

**1. ಸಾಮಾನ್ಯ ಕಾರ್ಯಗಳು:**

- ❖ ತೋಟಗಾರಿಕೆ ಉಪನಿರ್ದೇಶಕರ ಕಛೇರಿಯು ಇಲಾಖೆಯ ಜಿಲ್ಲಾ ಕೇಂದ್ರ ಕಛೇರಿಯಾಗಿದ್ದು, ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು.
- ❖ ಜಿಲ್ಲೆಯ ತೋಟಗಾರಿಕೆ ಬೆಳೆಗಾರರ ಅವಶ್ಯಕತೆಗಳಿಗೆ ತಕ್ಕಂತೆ ಯೋಜನೆಗಳನ್ನು ರೂಪಿಸುವುದು, ತಾಲ್ಲೂಕು ಅನುಷ್ಠಾನಾಧಿಕಾರಿಗಳೊಂದಿಗೆ ಚರ್ಚಿಸಿ ವಿವಿಧ ಯೋಜನೆಗಳ ವಾರ್ಷಿಕ ಕ್ರಿಯಾ ಸಿದ್ದಪಡಿಸುವುದು.
- ❖ ತೋಟಗಾರಿಕೆ ನಿರ್ದೇಶನಾಲಯ, ಜಿಲ್ಲಾ ಪಂಚಾಯತ್‌ವತಿಯಿಂದ ಅನುಮೋಧನೆಯಾದ ಕ್ರಿಯಾ ಯೋಜನೆಯಂತೆ ವಿವಿಧ ಯೋಜನೆಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಿ ಸಮರ್ಪಕವಾಗಿ ಅನುಷ್ಟಾನಗೊಳಿಸಲು ತಾಲ್ಲೂಕು ಅನುಷ್ಠಾನಾಧಿಕಾರಿಗಳಿಗೆ ನೀಡುವುದು.
- ❖ ಅಧೀನ ಕಛೇರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.
- ❖ ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಸರ್ವತೋಮುಖ ಅಭಿವೃದ್ಧಿಪಡಿಸಲು ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ) ರವರಿಗೆ ಅವಶ್ಯವಿರುವ ಮಾರ್ಗದರ್ಶನ ನೀಡುವುದು.
- ❖ ಯೋಜನೆ /ಯೋಜನೇತರ ಬಿಲ್ಲುಗಳಿಗೆ ಮೇಲು ರುಜು ಮಾಡುವುದು.
- ❖ ಜಿಲ್ಲೆಯ ವಿವಿಧ ತಾಲೂಕಾ ತೋಟಗಾರಿಕಾ ಕಛೇರಿಗಳು ಹಾಗೂ ರಾಜ್ಯ ವಲಯ ಕಛೇರಿಗಳ ಪರಿಶೀಲನೆ ನಡೆಸುವುದು.
- ❖ ಜಿಲ್ಲಾ ಮಟ್ಟದಲ್ಲಿ ವಿವಿಧ ಯೋಜನೆಗಳ ಅನುಷ್ಟಾನ ಮತ್ತು ಪ್ರಗತಿಯ ಪರಿಶೀಲನೆ ಮಾಡಿ ಜಿಲ್ಲಾ ಕ್ರೋಡಿಕೃತ ಪ್ರಗತಿ ವರದಿಯನ್ನು ತಯಾರಿಸಿ ರಾಜ್ಯ ಮಟ್ಟಕ್ಕೆ ಸಲ್ಲಿಸುವುದು.
- ❖ ವಿಶೇಷ ಯೋಜನೆಗಳ ಅನುಷ್ಟಾನಕ್ಕೆ ಅವಶ್ಯವಿರುವ ಜಿಲ್ಲಾ ಮಟ್ಟದ ಸಮಿತಿಗಳ ಸಭೆ ಕರೆಯುವುದು.
- ❖ ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ನಡೆಯುವ ಪ್ರಗತಿ ಪರಿಶೀಲನೆ/ ಇತರೆ ಸಭೆಗಳಿಗೆ ಇಲಾಖೆಗೆ ಸಂಬಂಧಿಸಿದ ಮಾಹಿತಿ ಸಲ್ಲಿಸುವುದು.

- ಪ್ರಕೃತಿ ವಿಕೋಪ ಸಂಭವಿಸಿದ ಸಮಯದಲ್ಲಿ ಆಗಿರುವ ಹಾನಿಯ ಅಂದಾಜನ್ನು ಪರಿಶೀಲಿಸಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಸಹಾಯಧನಕ್ಕೆ ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡುವುದು.

**ವಿಸ್ತರಣೆ ಮತ್ತು ತರಬೇತಿ:**

- ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಕುರಿತು ರೈತರಿಗೆ ಜಾಗೃತಿ ಶಿಬಿರ, ಜನಸ್ಪಂದನ ಮತ್ತು ಸಭೆಗಳಲ್ಲಿ ಮಾಹಿತಿ ನೀಡುವುದು.
- ತೋಟಗಾರಿಕೆ ಬೆಳೆಗಳ ಬೇಸಾಯ, ನಿರ್ವಹಣೆ, ಕೊಯ್ಲು, ಸಂಸ್ಕರಣೆ ಕುರಿತು ರೈತರಿಗೆ ತರಬೇತಿ ನೀಡುವುದು.
- ತೋಟಗಾರಿಕೆಯಲ್ಲಿ ಸಾವಯವ ಕೃಷಿ, ಜೇನು ಕೃಷಿ ಮುಂತಾದ ಅವಶ್ಯಕ ಹೊಸ ತಂತ್ರಜ್ಞಾನಗಳನ್ನು ರೈತರಿಗೆ ತರಬೇತಿ, ವಿಚಾರ ಸಂಕಿರಣ, ಕಾರ್ಯಾಗಾರ ಮುಂತಾದವುಗಳನ್ನು ಏರ್ಪಡಿಸುವ ಮೂಲಕ ಮಾಹಿತಿ ಒದಗಿಸುವುದು.
- ತೋಟಗಾರಿಕೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಹೊಸ ಹೊಸ ಯೋಜನೆಗಳ ಮಾಹಿತಿಯನ್ನು ಪತ್ರಿಕೆ, ಆಕಾಶವಾಣಿ, ದೂರದರ್ಶನ ಮುಂತಾದ ಸಮೂಹ ಮಾಧ್ಯಮಗಳ ಮೂಲಕ ರೈತರಿಗೆ ತಲುಪುವಂತೆ ಮಾಡುವುದು.
- ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ ಮುಂತಾದ ಕೃಷಿ ಆಧಾರಿತ ಸಂಶೋಧನಾ ಕೇಂದ್ರಗಳಿಂದ ವಿವಿಧ ಹೊಸ ತಂತ್ರಜ್ಞಾನಗಳನ್ನು ರೈತರ ತೋಟಗಳಿಗೆ ತಲುಪಿಸುವಂತೆ ಮಾಡುವುದು.
- ರೈತರ ಮಕ್ಕಳಿಗೆ, ರೈತರಿಗೆ, ರೈತ ಮಹಿಳೆಯರಿಗೆ ತರಬೇತಿ ನೀಡುವುದು.
- ರೈತರನ್ನು ರಾಜ್ಯ ಮತ್ತು ಹೊರ ರಾಜ್ಯಗಳ ಉತ್ತಮ ತೋಟ, ಸಂಶೋದನಾ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ರೈತರ ಜ್ಞಾನ ವರ್ಧನೆಗೆ ಸಹಕರಿಸುವುದು.

**ಸಸ್ಯಾಭಿವೃದ್ಧಿ:**

- ಉತ್ತಮ ಗುಣಮಟ್ಟದ ಜಿಲ್ಲೆಯ ವಾತಾವರಣಕ್ಕೆ ಹೊಂದುವ ತಳಿಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸುವುದು.
- ಇಲಾಖೆಯ ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಕಸಿ/ಸಸಿಗಳನ್ನು ಉತ್ಪಾದಿಸಿ ರೈತರಿಗೆ ಇಲಾಖಾ ದರದಲ್ಲಿ ಮಾರಾಟ ಮಾಡಲು ಕ್ರಮ ಕೈಗೊಳ್ಳುವುದು.

- ಉತ್ತಮ ಗುಣಮಟ್ಟದ ಕಸಿ/ಸಸಿಗಳು ಅವಶ್ಯಕ ಪ್ರಮಾಣದಲ್ಲಿ ಸಾರ್ವಜನಿಕ ವಲಯದಲ್ಲಿ ಲಭ್ಯವಿಲ್ಲದಿದ್ದ ಸಮಯದಲ್ಲಿ ನಿರ್ದೇಶನಾಲಯದ ಮಾರ್ಗದರ್ಶನದಂತೆ ಖಾಸಗಿ ವಲಯದ ನರ್ಸರಿಗಳಿಂದ ಕರ್ನಾಟಕ ಪಾರದರ್ಶಕ ನಿಯಮಾವಳಿಗಳ ಮೂಲಕ ಪಡೆದು ರೈತರಿಗೆ ಒದಗಿಸುವ ವ್ಯವಸ್ಥೆ ಮಾಡುವುದು.
- ಜಿಲ್ಲೆಯ ವಿಶೇಷ ತೋಟಗಾರಿಕೆ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು.

**ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಡೆ ನಿರ್ವಹಣೆ:**

- ತೋಟಗಾರಿಕೆ ಬೆಳೆಗಳಿಗೆ ಅವಶ್ಯವಿರುವ ಪೋಷಕಾಂಶಗಳ ನಿರ್ವಹಣೆ ಮಾಡಲು ಬೇಕಾದ ಜೈವಿಕ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸುವ ವೈವಸ್ಥೆ ಮಾಡುವುದು.
- ಮಣ್ಣಿನ ರಸಸಾರ ನಿರ್ವಹಣೆಗೆ ಅವಶ್ಯವಾದ ಸುಣ್ಣ / ಜಿಪ್ಸಂ ಬಳಸಲು ಪ್ರೋತ್ಸಾಹಿಸುವುದು.
- ಹಸಿರೆಲೆ ಗೊಬ್ಬರಗಳ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿ ಬಳಕೆಯನ್ನು ಪ್ರೋತ್ಸಾಹಿಸುವುದು.
- ಜೈವಿಕ ಪದ್ದತಿಯಲ್ಲಿ ರೋಗ ಮತ್ತು ಕೀಟಗಳ ನಿಯಂತ್ರಣ ಪದ್ದತಿಗೆ ಪ್ರೋತ್ಸಾಹಿಸುವುದು.
- ಬೋರ್ಡೋ ಮಿಶ್ರಣ, ಜೈವಿಕ ಕೀಟನಾಶಕಗಳು, ಸಮ್ಮೋಹಕ ಬಲೆಗಳ ಬಳಕೆಗೆ ಸಹಾಯಧನ ಒದಗಿಸುವುದು.
- ಸಾರ್ವಜನಿಕ ವಲಯದಲ್ಲಿ ರೋಗ ಮುನ್ಸೂಚನಾ ಘಟಕಗಳನ್ನು ಸ್ಥಾಪಿಸಿ ಮುಂದೆ ಬರಬಹುದಾದ ರೋಗಗಳ ಯಾ ಕೀಟಗಳ ಹತೋಟಿಗೆ ಅವಶ್ಯಕ ಮಾಹಿತಿಯನ್ನು ರೈತರಿಗೆ ಒದಗಿಸುವುದು.

**ಸಾವಯವ ಕೃಷಿ:**

- ಸ್ಥಳಿಯವಾಗಿ ಲಭ್ಯವಿರುವ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಅತಿ ಕಡಿಮೆ ಖರ್ಚಿನಲ್ಲಿ ಎರೆಹುಳು ಗೊಬ್ಬರ, ಬಯೋಡೈಜೆಸ್ಟರ್‌ಗಳನ್ನು ನಿರ್ಮಿಸಲು ಪ್ರೋತ್ಸಾಹಿಸುವುದು.
- ಸಾವಯವ ಪರಿವರ್ತನೆಗೆ ರೈತರನ್ನು ಪ್ರೋತ್ಸಾಹಿಸುವುದು.
- ಸಾವಯವ ಕೃಷಿ ದೃಡೀಕರಣ ವ್ಯವಸ್ಥೆ ಹೊಂದಲು ಪ್ರೋತ್ಸಾಹಿಸುವುದು.
- ಸಾವಯವ ಕೃಷಿ ಅಳವಡಿಕೆ ಕುರಿತು ಸರ್ವಿಸ್ ಪ್ರೊವೈಡರ್‌ಗಳು, ಸಾವಯವ ಕೃಷಿಕರಿಗೆ, ಇಲಾಖಾ ವಿಸ್ತರಣಾಧಿಕಾರಿಗಳಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡುವುದು.
- ಇಲಾಖೆಯ ತೋಟಗಾರಿಕೆ ಕ್ಷೇತ್ರಗಳಲ್ಲಿ ಮಾದರಿ ಸಾವಯವ ತೋಟ ನಿರ್ಮಾಣ ಮಾಡಿಸುವುದು.

**ಇತರೆ ಕಾರ್ಯಗಳು:**

- ❖ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಾನ್ಯ ತೋಟಗಾರಿಕೆ ನಿರ್ದೇಶಕರು, ಮತ್ತಿತರ ಮೇಲಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸೂಚಿಸುವ ವಿಶೇಷ ಕೆಲಸಗಳನ್ನು ನಿಯಮಾನುಸಾರ ನಿರ್ವಹಿಸುವುದು.
- ❖ ಜನಸ್ಪಂದನಾ ಸಭೆ ಮುಂತಾದ ಸಭೆಗಳಿಗೆ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
- ❖ ಪ್ರಕೃತಿ ವಿಕೋಪ ಮುಂತಾದ ಸಮಯಗಳಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಕೆಲಸ ನಿರ್ವಹಿಸುವುದು.
- ❖ ಇನ್ನಿತರೆ ಕಾಲಕಾಲಕ್ಕೆ ಸೂಚಿಸಲಾಗುವ ವಿಶೇಷ ಕಾರ್ಯ ನಿರ್ವಹಿಸುವುದು.

**4 (I) (ಬಿ)– (II) ಅಧಿಕಾರಿ/ ನೌಕರರುಗಳ ಅಧಿಕಾರ ಮತ್ತು ಕರ್ತವ್ಯಗಳು**

| | |
|---|---|
| **ತೋಟಗಾರಿಕೆ ಉಪನಿರ್ದೇಶಕರು** | 1. ಜಿಲ್ಲಾ ಮಟ್ಟದ ಅಧಿಕಾರಿಗಳಾಗಿ ಆಡಳಿತ ಹಾಗೂ ಇಲಾಖಾವತಿಯಿಂದ ನಿಗಧಿಪಡಿಸಿದ ಕೆಲಸ ಕಾರ್ಯಗಳ ನಿರ್ವಹಣೆ ಬಗ್ಗೆ ಮುಖ್ಯ ನಿರ್ಣಾಯಕರಾಗಿದ್ದಾರೆ.<br>2. ಜಿಲ್ಲಾ ಹಂತದಲ್ಲಿ ನಡೆಯುವ ಇಲಾಖಾ ಚಟುವಟಿಕೆಗಳ ಹಾಗೂ ಯೋಜನೆಗಳ ಪರಿಶೀಲನೆ ಮಾಡುವ ಅಧಿಕಾರ ಹೊಂದಿರುತ್ತಾರೆ.<br>3. ಅಧೀನ ಅಧಿಕಾರಿ/ಸಿಬ್ಬಂದಿ ವರ್ಗದವರ ವಿಷಯಗಳು ಹಾಗೂ ಇಲಾಖೆಯ ವಿಷಯಗಳ ಬಗ್ಗೆ ನಿಯಂತ್ರಣಾಧಿಕಾರಿಗಳಾಗಿರುತ್ತಾರೆ.<br>4. ದಾವಣಗೆರೆ ಜಿಲ್ಲೆಯ ವ್ಯಾಪ್ತಿಯೊಳಗೆ ಬರುವ ವಿವಿಧ ತೋಟಗಾರಿಕೆ ಕ್ಷೇತ್ರಗಳ ಪರಿವೀಕ್ಷಣೆ ಮಾಡುವ ಹಾಗೂ ಹರಾಜು ಪ್ರಕ್ರಿಯೆ ನಡೆಸುವ ಪೂರ್ಣ ಅಧಿಕಾರ ಹೊಂದಿರುತ್ತಾರೆ.<br>5. ಜಿಲ್ಲೆಯಲ್ಲಿ ನಡೆಯುವ ತೋಟಗಾರಿಕೆ ಚಟುವಟಿಕೆಗಳ ಬಗ್ಗೆ ಪರಿವೀಕ್ಷಣೆ ಮಾಡುವ, ವಿವಿಧ ತಾಲ್ಲೂಕಿನಲ್ಲಿ ಕೈಗೊಳ್ಳಬಹುದಾದ ಹಲವಾರು ಯೋಜನೆಗಳ ಅನುಷ್ಠಾನಗೊಳಿಸುವಾಗ ತಾಕುಗಳ ಪರಿಶೀಲನೆ ಮಾಡುವ ಅಧಿಕಾರ ಹೊಂದಿದವರಾಗಿರುತ್ತಾರೆ.<br>6. ಜಿಲ್ಲಾ ಪಂಚಾಯತ್, ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ವಿವಿಧ ಇಲಾಖೆ ಸಂಘ ಸಂಸ್ಥೆಗಳ ಸಭೆ/ಸಮಾರಂಭಗಳಿಗೆ ಭಾಗವಹಿಸಿ ಇಲಾಖೆಯ ಯೋಜನೆ ಅನುಷ್ಠಾನದ ಬಗ್ಗೆ ಪೂರ್ಣ ಮಾಹಿತಿ ನೀಡುವ ಅಧಿಕಾರ ಹೊಂದಿದವರಾಗಿರುತ್ತಾರೆ.<br>7. ಸಾದಿಲ್ವಾರು, ಸವಿವರ ಸಾದಿಲ್ವಾರು ಬಿಲ್ಲುಗಳಿಗೆ ಮೇಲುರುಜು ಮಾಡುವ ಹಾಗೂ ನೀಡಿದ ಆರ್ಥಿಕ ಹಾಗೂ ತಾಂತ್ರಿಕ ಅಧಿಕಾರ ಬಳಸಿಕೊಂಡು ಮಂಜೂರಾತಿ ನೀಡುವ ಅಧಿಕಾರ ಹೊಂದಿದವರಾಗಿರುತ್ತಾರೆ.<br>8. ವಿಶೇಷ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಿರುವ ಜಿಲ್ಲಾ ಮಟ್ಟದ ಸಮಿತಿಗಳ |

| | |
|---|---|
| | ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವುದು.<br>9. ಪ್ರತಿ ವಿಷಯ ಹಾಗೂ ಪ್ರಸ್ತಾವನೆಗಳ ಮೇಲೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತೀರ್ಮಾನಿಸಿ ತಮ್ಮ ಹುದ್ದೆಗೆ ನೀಡಿರುವ ಅಧಿಕಾರಕ್ಕೆ ಒಳಪಟ್ಟು ಅನುಮೋದನೆ/ ಮಂಜೂರಾತಿ ನೀಡುವುದು. ಅಗತ್ಯವಾದಲ್ಲಿ ಜಿಲ್ಲಾ ಪಂಚಾಯತ್/ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡುವುದು. |
| **ಕೇಂದ್ರ ಕಛೇರಿ ಸಹಾಯಕರು** | ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು. ಕಛೇರಿಯ ತಾಂತ್ರಿಕ ಸಹಾಯಕರು ಹಾಗೂ ಅಧೀಕ್ಷಕರು ಸಲ್ಲಿಸುವ ಕಡತಗಳನ್ನು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು. ಪ್ರಮುಖ ವಿಷಯಗಳನ್ನು ತೋಟಗಾರಿಕೆ ಉಪನಿರ್ದೇಶಕರವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದು. ತಮ್ಮ ಅಧೀನ ಸಿಬ್ಬಂದಿಗಳೊಂದಿಗೆ ಕಡತವನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮವಹಿಸುವುದು, ತೋಟಗಾರಿಕೆ ಉಪನಿರ್ದೇಶಕರ ಅನುಪಸ್ಥಿತಿಯಲ್ಲಿ ಕಛೇರಿ ದೈನಂದಿನ ಕೆಲಸಗಳ ನಿರ್ವಹಣೆ, ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ನಡೆಯುವ ಪ್ರಗತಿ ಪರಿಶೀಲನಾ ಸಭೆ/ಇತರೆ ಸಭೆಗಳಿಗೆ ಭಾಗವಹಿಸಿ ವರದಿ ಮಂಡಿಸುವುದು, ಜಿಲ್ಲಾವಲಯ, ರಾಜ್ಯವಲು ಹಾಗೂ ಕೇಂದ್ರವಲಯದ ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆ, ಎಂ.ಎಂ.ಆರ್/ಎಂಪಿಕ್ ತಯಾರಿಸಲು ಕ್ರಮ ವಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾತೋಮಿ)** | ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ನಿರ್ವಹಿಸುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಶಾಖೆಗಳ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ ವಿಷಯಗಳನ್ನು ತೋಟಗಾರಿಕೆ ಉಪನಿರ್ದೇಶಕರೊಂದಿಗೆ ಚರ್ಚಿಸಿ ಅಧೀನ ಕಛೇರಿಗಳಿಂದ ಸ್ವೀಕರಿಸಲಾದ ಕಡತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವುದು. ಫಲಾನುಭವಿಗಳ ತಾಕು/ತೋಟಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ಯೋಜನೆಯ ಸಮರ್ಪಕ ಅನುಷ್ಟಾನಕ್ಕಾಗಿ ಕ್ರಮವಹಿಸುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಹಾಗೂ ಇತರೆ ಕೇಂದ್ರ ವಲಯದ ಯೋಜನೆಗಳ ಕ್ರಿಯಾ ಯೋಜನೆ, ಪ್ರಗತಿ ವರದಿ ತಯಾರಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸ ನಿರ್ವಹಿಸುವುದು. |
| **ತಾಂತ್ರಿಕ ಸಹಾಯಕರು** | ರಾಜ್ಯ ವಲಯ, ಜಿಲ್ಲಾ ಪಂಚಾಯತ್ ಯೋಜನೆಗಳಿಗೆ ಸಂಬಂಧಿಸಿದ ಕಡತ ನಿರ್ವಹಣೆ, ತಾಲ್ಲೂಕುವಾರು ಎಂ.ಎಂ.ಆರ್., ಮಾಸಿಕ ಪ್ರಗತಿ ವರದಿ, ಹವಮಾನ ವರದಿ, ಜಿಲ್ಲಾ ಪಂಚಾಯಿತಿಯ ಕೆ.ಡಿ.ಪಿ, ಸ್ಥಾಯಿ ಸಮಿತಿ ಸಭೆಗಳಿಗೆ ಪಾಲನಾ ವರದಿ/ಪ್ರಗತಿ ವರದಿ ಸಿದ್ದಪಡಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು. ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು ಹಾಗೂ ಇತರ ಸುತ್ತೋಲೆಗಳನ್ನು ತಾಲೂಕು ಅಧಿಕಾರಿಗಳಿಗೆ ರವಾನಿಸುವುದು, ತೋಟಗಾರಿಕೆ ಬೆಳೆಗಳ ಮೌಲ್ಯಮಾಪನವರದಿಯನ್ನು ಪರಿಶೀಲಿಸುವುದು ಹಾಗೂ ತಾಂತ್ರಿಕ ಮಂಜೂರಾತಿ ಅಗತ್ಯವಿದ್ದಲ್ಲಿ ಸಿದ್ದಪಡಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು. ಫಲಾನುಭವಿಗಳ ಪಟ್ಟಿ ಹಾಗೂ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆ ಮಾಹಿತಿಯನ್ನು ತಾಲ್ಲೂಕು ಅಧಿಕಾರಿಗಳಿಂದ ಸಂಗ್ರಹಿಸಿ ಕ್ರೂಢೀಕರಿಸಿ ಎಲ್ಲಾ ವರದಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಇಲಾಖಾ ಯೋಜನೆಗಳಿಗೆ ಸಂಬಂಧಿಸಿದ ವಿಧಾನಸಭೆ/ಲೋಕಸಭೆ, ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಿದ್ದಪಡಿಸುವುದು. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಜಿಲ್ಲಾ ಪಂಚಾಯತ ತೋಟಗಾರಿಕೆ ಕ್ಷೇತ್ರಗಳ ಫಸಲು ಹರಾಜು ಪ್ರಕ್ರಿಯೆ ಜವಾಬ್ದಾರಿ ವಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಅಧೀಕ್ಷಕರು:** | ಕಛೇರಿಯ ವಿವಿಧ ಶಾಖೆಯ ವಿಷಯ ನಿರ್ವಾಹಕರು ಮಂಡಿಸುವ ಕಡತಗಳನ್ನು |

| | |
|---|---|
| | ನಿಯಮಾನುಸಾರ ಪರಿಶೀಲಿಸಿ ಮುಂದಿನ ಆದೇಶ ಕೋರಿ ಮೇಲಾಧಿಕಾರಿಗಳಿಗೆ ಮಂಡಿಸುವುದು, ಲೆಕ್ಕ ತಪಾಸಣೆ ವರದಿಗಳಿಗೆ ಅನುಸರಣಾ ಉತ್ತರಗಳನ್ನು ಸಿದ್ದಪಡಿಸುವುದು, ಎಲ್ಲಾ ಆಡಿಟ್ ಕಡತಗಳನ್ನು ಪರಿಶೀಲಿಸಿ ವಿಲೇವಾರಿಗೆ ಕ್ರಮ ವಹಿಸುವುದು. ಕಛೇರಿಯ ಮುಖ್ಯಸ್ಥರೊಂದಿಗೆ ತಾಲೂಕು ಮಟ್ಟದ ಕಛೇರಿಗಳ ವಾರ್ಷಿಕ ತಪಾಸಣೆ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಪ್ರಥಮ ದರ್ಜೆ ಸಹಾಯಕರು** | ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿ ನಿಯಮಗಳ ಪ್ರಕಾರ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು ನಗಧು ಹಾಗೂ ನಗದು ಪುಸ್ತಕಗಳ ನಿರ್ವಹಣೆ, ರಾಜ್ಯವಲಯ ಹಾಗೂ ಇತರ ವಿಶೇಷ ಯೋಜನೆಗಳ ತಾಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಮಂಜೂರಾತಿ ಕ್ರಮವಹಿಸುವುದು, ಸದರಿ ಯೋಜನೆಗಳ ಅನುದಾನ ಬಿಡುಗಡೆ ಬಗ್ಗೆ ಕ್ರಮವಹಿಸುವುದು ಸರ್ಕಾರಿ ಆದೇಶ/ ಸುತ್ತೋಲೆಗಳ ಕಡತ ನಿರ್ವಹಣೆ, ಕಛೇರಿ ಆದೇಶ ಪುಸ್ತಕ ನಿರ್ವಹಣೆ ಅಧಿಕಾರಿ/ಸಿಬ್ಬಂಧಿಗಳ ರಜೆ, ವೇತನ ಬಡ್ತಿ, ಪಿಂಚಣಿ ಸೌಲಭ್ಯ ಇತ್ಯಾದಿ ಕಡತಗಳ ನಿರ್ವಹಣೆ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ದ್ವಿತೀಯ ದರ್ಜೆ ಸಹಾಯಕರು** | ಕಡತಗಳ ರಚನೆ, ವಿಷಯ ವಹಿ ರಚನೆ, ಕಡತಗಳ ಚಲನವಲನ, ಕಡತಗಳ ಕಾಯುವಿಕೆ, ಪತ್ರಗಳನ್ನು ಸ್ವೀಕರಿಸಿದ್ದಕ್ಕೆ ನಮೂದಿಕರಣ, ಕಡತ ಟಪಾಲುಗಳನ್ನು ಶಾಖೆಯಲ್ಲಿ ಹಂಚುವುದು, ಕಡತಗಳ ರವಾನೆ, ಪ್ರತಿಗಳನ್ನು ಮಾಡುವುದು, ವೇತನ ಬಿಲ್ಲು, ಡಿ.ಸಿ. ಬಿಲ್ಲು, ಎ.ಸಿ. ಬಿಲ್ಲು, ಎನ್.ಡಿ.ಸಿ. ಬಿಲ್ಲು, ಪ್ರವಾಸ ಭತ್ಯೆ ಬಿಲ್ಲು ತಯಾರಿಸುವುದು ಹಾಗೂ ಸಂಬಂಧಪಟ್ಟ ವಹಿಗಳ ನಿರ್ವಹಣೆ ಮಾಸಿಕ ಖರ್ಚು ಆದಾಯ ತಖ್ತೆ ತಯಾರಿಸುವುದು. ಸಾಧಿಲ್ವಾರು ಇತರ ಬಿಲ್ಲುಗಳಿಗೆ ಮಂಜೂರಾತಿ ಕ್ರಮ ಕೈಗೊಳ್ಳುವುದು, ಸ್ಟಾಂಪ್ ವಹಿ ನಿರ್ವಹಣೆ ಹಾಗೂ ಜಿಲ್ಲಾ ಪಂಚಾಯತ ತಾಲೂಕು ಪಂಚಾಯತ ನಿಧಿಗೆ ಸಂಬಂಧಿಸಿದ ತಾಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು ಮತ್ತು ಸದರಿ ಯೋಜನೆಗಳ ಅನುದಾನ ಬಿಡುಗಡೆ ಕ್ರಮ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಬೆರಳಚ್ಚುಗಾರರು:** | ಶಾಖೆಗಳ ಎಲ್ಲಾ ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು, ಬೆರಳಚ್ಚು ಮಾಡಿದ ಪ್ರತಿಗಳ ಲೆಕ್ಕವನ್ನು ನಿರ್ವಹಿಸುವುದು ಹಾಗೂ ಗಣಕಯಂತ್ರದ ಕೆಲಸ ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ವಾಹನ ಚಾಲಕರು** | ಇಲಾಖೆಯ ವಾಹನವನ್ನು ವ್ಯವಸ್ಥಿತ ರೀತಿಯಲ್ಲಿ ಸುಸಜ್ಜಿತವಾಗಿ ಇರಿಸಿಕೊಳ್ಳುವುದು. ಇಲಾಖಾ ವಾಹನದ ಲಾಗ್‌ಬುಕ್ ನಿರ್ವಹಿಸುವುದು. ಇಲಾಖಾ ವಾಹನಕ್ಕೆ ಸಂಬಂಧಿಸಿದ ದುರಸ್ತಿ, ವಿಮಾ ಮರುನೊಂದಣಿ, ಅವಶ್ಯಕ ದೃಡೀಕರಣವನ್ನು ಸಾರಿಗೆ ಅಧಿಕಾರಿಗಳಿಂದ ಪಡೆಯುವುದು, ವಾಹನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಸೇವಕರು:** | ಕಛೇರಿಯನ್ನು ಶುಚಿಯಾಗಿಡುವುದು, ಕಡತ ಮತ್ತು ಟಪಾಲುಗಳನ್ನು ಶಾಖೆಗಳಿಗೆ ತೆಗೆದುಕೊಂಡು ಹೋಗುವುದು, ಪತ್ರಗಳ ವಿತರಣೆ, ಅಂಚೆ ಕಛೇರಿಗೆ ಹೋಗಿ ಬರುವುದು, ಸರ್ಕಾರಿ ಸುತ್ತೋಲೆಗಳನ್ನು ಸಂಬಂಧಿಸಿದ ಎಲ್ಲಾ ಕಛೇರಿಗಳಿಗೆ ವಿತರಿಸುವುದು, ಕೆಲಸದ ಅವಧಿಯಲ್ಲಿ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸತಕ್ಕದ್ದು ಹಾಗೂ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

**ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ**

## 4 (I) (ಬಿ)– (III) ನಿಯಮ ತೆಗೆದುಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ, ಚಾನಲ್‌ಗಳ ಮತ್ತು ಅಕೌಂಟೆಬಲಿಟಿ ಸೇರಿದಂತೆ

| | |
|---|---|
| **ತೋಟಗಾರಿಕೆ ಉಪನಿರ್ದೇಶಕರು** | ಪ್ರತಿ ವಿಷಯ ಹಾಗೂ ಪ್ರಸ್ತಾವನೆಗಳ ಮೇಲೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತೀರ್ಮಾನಿಸಿ ತಮ್ಮ ಹುದ್ದೆಗೆ ನೀಡಿರುವ ಅಧಿಕಾರಕ್ಕೆ ಒಳಪಟ್ಟು ಅನುಮೋದನೆ/ ಮಂಜೂರಾತಿ ನೀಡುವುದು. ಅಗತ್ಯವಾದಲ್ಲಿ ಜಿಲ್ಲಾ ಪಂಚಾಯತ್/ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡುವುದು. |
| **ಕೇಂದ್ರ ಕಛೇರಿ ಸಹಾಯಕರು** | ಕಛೇರಿಯ ಎಲ್ಲಾ ಶಾಖೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಸಹಾಯಕರು ಹಾಗೂ ಅಧೀಕ್ಷಕರು ಸಲ್ಲಿಸಿರುವ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು ಪ್ರಮುಖ/ತುರ್ತು ವಿಷಯಗಳನ್ನು ತೋಉನಿ ರವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದು. ತೋಉನಿ.ರವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕೆಲಸಗಳನ್ನು ನಿರ್ವಹಿಸುವುದು |
| **ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾತೋಮಿ)** | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಹಾಗೂ ಇತರೆ ಕೇಂದ್ರವಲಯ ಯೋಜನೆಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಹಾಪ್‌ಕಾಮ್ಸ್ ಎಂ.ಡಿ.ಆಗಿ ಕಾರ್ಯ ನಿರ್ವಹಿಸುವುದು. |
| **ತಾಂತ್ರಿಕ ಸಹಾಯಕರು** | ತಮ್ಮ ವಿಭಾಗಕ್ಕೆ ಸ್ವೀಕರಿಸುವ ಎಲ್ಲಾ ಪತ್ರಗಳನ್ನು ಹಾಗೂ ತಾಂತ್ರಿಕ ಕಡತಗಳನ್ನು ಎಲ್ಲ ದೃಷ್ಟಿಕೋನದಿಂದ ಪರಿಶೀಲಿಸಿ ಮೇಲಾಧಿಕಾರಿಗಳ ಆದೇಶಕ್ಕಾಗಿ ಮಂಡಿಸುವುದು. ಅಗತ್ಯವಿದ್ದಲ್ಲಿ ಪ್ರಮುಖ ವಿಷಯದ ಕಡತಗಳನ್ನು ಕೇಂದ್ರ ಕಛೇರಿ ಸಹಾಯಕರು/ಮೇಲಾಧಿಕಾರಿಗಳ ಆದೇಶಕ್ಕಾಗಿ ಮಂಡಿಸುವುದು. |
| **ಅಧೀಕ್ಷಕರು:** | ತಮ್ಮ ವ್ಯಾಪ್ತಿಗೆ ಸಂಬಂಧಿಸಿದ ವಿಷಯ ನಿರ್ವಾಹಕರು ಮಂಡಿಸುವ ಕಡತಗಳನ್ನು ಆ ಪ್ರಕರಣದಲ್ಲಿ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ನಿಯಮಗಳನ್ನು ನಮೂದಿಸಿ ಮುಂದಿನ ಆದೇಶಕ್ಕಾಗಿ ಕೇಂದ್ರ ಕಛೇರಿ ಸಹಾಯಕರಿಗೆ ಮಂಡಿಸುವುದು ಲೆಕ್ಕ ತಪಾಸಣೆ ಕಡತಗಳ ಅಥವಾ ಶಿಸ್ತು ಕ್ರಮಗಳನ್ನು ಪರಿಶೀಲಿಸಿ ಶೀಘ್ರ ಇತ್ಯರ್ಥಕ್ಕೆ ಕ್ರಮ ವಹಿಸುವುದು. |
| **ಪ್ರಥಮ ದರ್ಜೆ ಸಹಾಯಕರು** | ತಾವು ಸೀಕರಿಸಿದ ಪತ್ರಗಳ ಸಂಬಂಧ ನಿಯಮಗಳ/ಸುತ್ತೋಲೆ/ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ತ್ವರಿತವಾಗಿ ವಿಳಂಬವಿಲ್ಲದೆ ಮಂಡಿಸುವುದು. |
| **ದ್ವಿತೀಯ ದರ್ಜೆ ಸಹಾಯಕರು** | ತಾವು ಸೀಕರಿಸಿದ ಪತ್ರಗಳ ಸಂಬಂಧ ನಿಯಮಗಳ/ಸುತ್ತೋಲೆ/ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ತ್ವರಿತವಾಗಿ ವಿಳಂಬವಿಲ್ಲದೆ ಮಂಡಿಸುವುದು. |
| **ಬೆರಳಚ್ಚುಗಾರರು** | ಶಾಖೆಯ ಎಲ್ಲಾ ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು. ಬೆರಳಚ್ಚು ಮಾಡಿದ ಪ್ರತಿಗಳ ಲೆಕ್ಕವನ್ನು ನಿರ್ವಹಿಸುವುದು. ಲೇಖನ ಸಾಮಾಗ್ರಿಗಳ ನಿರ್ವಹಣೆ ಇತ್ಯಾದಿ. (ಖಾಲಿ ಹುದ್ದೆ) |

**4 (I) (ಬಿ)– (IV) ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗಧಿಪಡಿಸಲಾದ ವಿದಾನಗಳು, ಕಟ್ಟುಪಾಡುಗಳು.**

| | |
|---|---|
| **ತೋಟಗಾರಿಕೆ ಉಪನಿರ್ದೇಶಕರು** | ಜಿಲ್ಲೆಯಲ್ಲಿ ತೋಟಗಾರಿಕೆ ಉಪನಿರ್ದೇಶಕರಿಗೆ ವಹಿಸಿದ ಅಭಿವೃದ್ಧಿ, ವಿಸ್ತರಣೆ ಹಾಗೂ ಆಡಳಿತ ನಿರ್ವಹಣೆ ಅಧೀನ ಅಧಿಕಾರಿ/ ಸಿಬ್ಬಂಧಿಗಳಿಂದ ಯಶಸ್ವಿಯಾಗಿ ಮತ್ತು ಶೀಘ್ರವಾಗಿ ನಿರ್ವಹಿಸಲು ಕ್ರಮವಹಿಸುವುದು. ಇಲಾಖೆಯ ಜಿಲ್ಲಾಉಸ್ತುವಾರಿ ವಹಿಸುವುದು. |
| **ಕೇಂದ್ರ ಕಛೇರಿ ಸಹಾಯಕರು** | ಶಾಖೆಗಳಿಂದ ಸ್ವೀಕರಿಸಿದ ಎಲ್ಲಾ ಕಡತಗಳನ್ನು ಎಲ್ಲಾ ದೃಷ್ಟಿಕೋನದಿಂದ ಪರಿಶೀಲಿಸಿ ಮೇಲಾಧಿಕಾರಗಳ ಆದೇಶಕ್ಕಾಗಿ ಮಂಡಿಸುವುದು ಅಗತ್ಯ ಕಂಡುಬಂದಲ್ಲಿ ಪ್ರಮುಖ ವಿಷಯದ ಕಡತಗಳನ್ನು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಆದೇಶ ಪಡೆಯುವುದು ಹಾಗೂ ಇತರೆ ಶಾಖೆಗಳೊಂದಿಗೆ ಸಮನ್ವಯ ಕಾರ್ಯಗಳನ್ನು ಸಹ ನಿರ್ವಹಿಸುವುದು |
| **ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾತೋಮಿ)** | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಶಾಖೆಗಳ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ ವಿಷಯಗಳನ್ನು ತೋಟಗಾರಿಕೆ ಉಪನಿರ್ದೇಶಕರೊಂದಿಗೆ ಚರ್ಚಿಸಿ ಕಡತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವುದು. |
| **ತಾಂತ್ರಿಕ ಸಹಾಯಕರು** | ತಾಂತ್ರಿಕ ಸಹಾಯಕರು ತಾಂತ್ರಿಕ ವಿಭಾಗಕ್ಕೆ ಸಂಬಂಧಿಸಿದ ಕಡತಗಳನ್ನು ನಿಯಮಾನುಸಾರವಾಗಿ ಪರಿಶೀಲಿಸಿ ಮುಂದಿನ ಆದೇಶ ಕೋರಿ ಕೇ.ಕ.ಸ./ ತೋ.ಉ.ನಿ. ರವರಿಗೆ ಮಂಡಿಸುವುದು. |
| **ಅಧೀಕ್ಷಕರು:** | ತಮ್ಮ ವ್ಯಾಪ್ತಿಗೆ ಸಂಬಂಧಿಸಿದ ವಿಷಯ ನಿರ್ವಾಹಕರು ಮಂಡಿಸುವ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಮುಂದಿನ ಆದೇಶಕ್ಕಾಗಿ ಕೇಂದ್ರ ಕಛೇರಿ ಸಹಾಯಕರು ರವರಿಗೆ ಮಂಡಿಸುವುದು. ಲೆಕ್ಕ ತಪಾಸಣೆ ಕಡತಗಳನ್ನು ಹಾಗೂ ಶಿಸ್ತು ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸುವಲ್ಲಿ ಕ್ರಮ ಕೈಗೊಳ್ಳಲು ಮಂಡಿಸುವುದು |
| **ಪ್ರಥಮ ದರ್ಜೆ ಸಹಾಯಕರು** | ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತಗಳನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶಕ್ಕಾಗಿ ಕಡತ ಮಂಡಿಸುವುದು |
| **ದ್ವಿತೀಯ ದರ್ಜೆ ಸಹಾಯಕರು** | ನಿಗದಿಪಡಿಸಿದ ಮಾರ್ಗಸೂಚಿ ಹಾಗೂ ಪ್ರತ್ಯಾಯೋಜಿಸಿದ ಪ್ರಾಧಿಕಾರಿಗಳ ಹಾಗೂ ನಿಯಮಗಳನುಸಾರ ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿರ್ವಹಿಸುವುದು. |
| **ಬೆರಳಚ್ಚುಗಾರರು** | ಶಾಖೆಯ ಎಲ್ಲಾ ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು. ಬೆರಳಚ್ಚು ಮಾಡಿದ ಪ್ರತಿಗಳ ಲೆಕ್ಕವನ್ನು ನಿರ್ವಹಿಸುವುದು. ಲೇಖನ ಸಾಮಾಗ್ರಿಗಳ ನಿರ್ವಹಣೆ ಇತ್ಯಾದಿ. (ಖಾಲಿ ಹುದ್ದೆ) |
| **ವಾಹನ ಚಾಲಕರು** | ವಾಹನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ನಿವ9ಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಸೇವಕರು** | ವಹಿಸಲಾದ ಎಲ್ಲಾ ಕಾರ್ಯಗಳನ್ನು ಈ ದಿನವೇ ಮಾಡುವುದು. |

**4 (I) (ಬಿ)– (V) :– ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸುವಾಗ ಉಪಯೋಗಿಸುವ/ ನಿಯಂತ್ರಣದಲ್ಲಿಟ್ಟು ಕೊಂಡಿರುವ ನಿಯಮಗಳು/ಸೂಚನೆಗಳು/ಕೈಪಿಡಿಗಳು/ ದಾಖಲೆಗಳು ಮತ್ತು ನಿಬಂಧನೆಗಳು:**

1. ಕರ್ನಾಟಕ ನಾಗರಿಕ ಸೇವಾ ನಿಯಮಗಳ **(KCSR)**
2. ಕರ್ನಾಟಕ ನಾಗರಿಕ ಸೇವಾ ನಿಯಮ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ ನಿಯಮಗಳು **(CCA Rules)**
3. ಕರ್ನಾಟಕ ಆರ್ಥಿಕ ಸಂಹಿತೆ **(KFC)**
4. ಕಛೇರಿ ಕೈಪಿಡಿ **(HBOP)**
5. ವೃಂದ ಮತ್ತು ನೇಮಕಾತಿ ರೂಲ್‌ಗಳು **(C & R Rules)**
6. ಆಯವ್ಯಯ ಕೈಪಿಡಿ **(Budget Mannual)**
7. ಕರ್ನಾಟಕ ಖಜಾನೆ ಸಂಚಿತ **(KFC)**
8. ಸಾಧಿಲ್ವಾರು ವೆಚ್ಚ ಕೈಪಿಡಿ **(MCE)**
9. ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮ **(KCS Conduct Rules)**
10. ಇಲಾಖಾ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ್
11. ಸರ್ಕಾರದ ಅಧಿ ಸೂಚನೆಗಳು (ಸುತ್ತೋಲೆಗಳು) ಇತ್ಯಾದಿ
12. ನಿರ್ದೇಶನಾಲಯದಿಂದ ಬರುವ ಯೋಜನಾ ಮಾರ್ಗಸೂಚಿಗಳು
13. ಕರ್ನಾಟಕ ಪಾರದರ್ಶಕತೆ ಅಧಿನಿಯಮ–1999
14. ಕರ್ನಾಟಕ ಪಂಚಾಯತರಾಜ್ ಅಧಿನಿಯಮ–1993
15. ಮಾಹಿತಿ ಹಕ್ಕು ಅಧಿನಿಯಮ–2005
16. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಗಳು
17. ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಗಳು
18. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯ ಮಾರ್ಗಸೂಚಿಗಳು
19. ರಾಜ್ಯ ವಲಯ ಹಾಗೂ ಜಿಲ್ಲಾ ಪಂಚಾಯತ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು
20. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ
21. ಇಲಾಖೆಯಿಂದ ಹೊರಡಿಸಲಾದ ವಿಶೇಷ ಆದೇಶಗಳು ಮತ್ತು ಸುತ್ತೋಲೆಗಳು

**4 (I)** (ಬಿ)– **(VI)** :– **ಕಡತ** ಶೀರ್ಷಿಕೆ:- (Statement of the categories of documents that are hold **it of under its )**

| ಕ್ರ.ಸಂ. | ಕಡತದ ಶಾಖೆ | | ದಾಖಲೆಗಳ ಉಲ್ಲೆಖ |
|---|---|---|---|
| | ಆಡಳಿತ | **ADM** | |
| **1** | ಸಿಬ್ಬಂದಿ | **EST** | ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಶಿಸ್ತು ನಡತೆ ಮತ್ತು ಇತರೆ ವಿಷಯಗಳು |
| **2** | ಶಿಸ್ತು ಶಾಖೆ | **DEP** | |
| **3** | ಲೆಕ್ಕ ಶಾಖೆ | **ACT** | ಲೆಕ್ಕ ಪತ್ರ ಹಾಗೂ ಲೆಕ್ಕ ಪತ್ರ ಪರಿಶೀಲನೆ |
| **4** | ಲೆಕ್ಕ ತಪಾಸಣೆ | **AUD** | |
| **5** | ಕಾನೂನು ಕೋಶ | **LGC** | ನ್ಯಾಯಾಲಯ ಪ್ರಕರಣ |
| **6** | ಲೇಖನ ಸಾಮಗ್ರಿ | **STN** | ಲೇಖನ ಸಾಮಗ್ರಿ ದೂರವಾಣಿ ಸ್ವೀಕೃತಿ ಮತ್ತು ರವಾನೆ |
| **7** | ನಗದು ಶಾಖೆ | **CASH** | ನಗದು ನಿರ್ವಹಣೆ |
| **8** | ವಾಹನ ಶಾಖೆ | **VEN** | ವಾಹನ ನಿರ್ವಹಣೆ |

1. ಸಾಮಾನ್ಯ ಸ್ವೀಕೃತಿ.
2. ನಮೂನೆ **VIII** ರವಾನೆ ರಿಜಿಸ್ಟರ್.
3. ನಮೂನೆ–ಎ ಮುದ್ದಾಮ ರಿಜಿಸ್ಟರ್.
4. ನಿಯಮ 27 (ನಿಯಮ 63) ಸ್ಟಾಂಪ್ ರಿಜಿಸ್ಟರ್.
5. ನಮೂನೆ–6 (ನಿಯಮ 38)ನಗದು ಪುಸ್ತಕ ರಿಜಿಸ್ಟರ್.
6. ಕ.ಅ.ಸ.ಪ್ರ ಪತ್ರ 1 (ಅನುಚ್ಛೇದ–6ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ)
7. ಕ.ಖ.ಸಂ 65–ಎ ಬಿಲ್ಲು ಹಾಜರುಪಡಿಸುವ ಚೀಟಿ ರಿಜಿಸ್ಟರ್.
8. ಕ.ಆ.ಸಂ ನಮೂನೆ 62–ಎ ಪರಿವರ್ತನೆಯ ಸಲುವಾಗಿ ಬಿಲ್‌ಗಳ ರಿಜಿಸ್ಟರ್.
9. ನಮೂನೆ ಸಂಖ್ಯೆ–24ಎ ವೇತನ ಬಟವಾಡೆ ಪುಸ್ತಕ (ನಮೂನೆ ಸಂಖ್ಯೆ 24ಎ)
10. ಆಕಸ್ಮಿಕ ರಜಾ ವಹಿ.
11. ತೋ.ಉ.ನಿ ಕಛೇರಿ ಅಧಿಕಾರಿ/ ಸಿಬ್ಬಂದಿ ವರ್ಗದವರ ವೇತನ ಬಿಲ್ಲಿನಲ್ಲಿ ಕಡಿತಗೊಳ್ಳುವ ರಿಜಿಸ್ಟರ್ ಹಬ್ಬದ ಮುಂಗಡ 2)
12. ಸಾ.ಭ.ನಿ, ಕೆ.ಜಿ.ಐ.ಡಿ, ಎಲ್.ಐ.ಸಿ, ವೃತ್ತಿ ತೆರಿಗೆ, ಜಿ.ಇ.ಎಸ್.
13. ಲೇಖನ ಸಾಮಗ್ರಿ ವಿತರಣಾ ರಿಜಿಸ್ಟರ್.
14. ದಿನವಹಿ ದಾಸ್ತಾನು ಪುಸ್ತಕ ರಿಜಿಸ್ಟರ್.
15. ತೋ.ಉ.ನಿ (ಜಿಪಂ) ದಾವಣಗೆರೆ ಕಛೇರಿಯ ಮಂಜೂರಾತಿ ಆದೇಶ ಪುಸ್ತಕ.
16. ಈ ಕಛೇರಿಯ ಸಾಧಿಲ್ವಾರು ಪುಸ್ತಕ.
17. ತಾಲೂಕು ಮಟ್ಟದ ಕಛೇರಿಗಳಿಗೆ ಮಂಜೂರಾತಿ ನೀಡುವ ವಹಿ.
18. ಡಿ.ಸಿ ಬಿಲ್ಲುಗಳನ್ನು ಮೇಲುಸಹಿ ಮಾಡುವ ವಹಿ.
19. ಜಿಲ್ಲಾ ಪಂಚಾಯತ್, ದಾವಣಗೆರೆಯಿಂದ ಬಂದ ಅನುದಾನವನ್ನು ತಾಲೂಕಾವಾರು ಬಿಡುಗಡೆ ಮಾಡುವ ವಹಿ.
20. ನಮೂನೆ 24 ನಿಯಮ–58 ಪ್ರಯಾಣ ಭತ್ಯೆ ರಿಜಿಸ್ಟರ್ (ನಮೂನೆ–24 (ನಿಯಮ–58).

21.ಕ.ಅ.ಸಂ/74ರಲ್ಲಿ ನಿಗಧಿಪಡಿಸಿರುವ ನಮೂನೆ ಸರ್ಕಾರದ ಮೋಟಾರು ವಾಹನದ ಲಾಗ್ ಪುಸ್ತಕ.
22.ಮಾಹೆವಾರು ಖರ್ಚಿನ ತಃಖ್ತೆಯ ರಿಜಿಸ್ಟರ್.
23.ಅಧಿಕಾರಿ/ ಸಿಬ್ಬಂದಿಗಳ ಹಾಜರಾತಿ ಪಟ್ಟಿ ರಿಜಿಸ್ಟರ್.
24.ಸಾಮಾನ್ಯ ಭವಿಷ್ಯ ನಿಧಿಯ ಮುಂಗಡ ಡ್ರಾ ಮಾಡುವ ರಿಜಿಸ್ಟರ್.
25.ವಿದ್ಯುತ್ ಬಳಕೆ ವೆಚ್ಚದ ವಹಿ.
26.ವಿಷಯ ವಹಿ ರಿಜಿಸ್ಟರ್.
27.ಎನ್.ಡಿ.ಸಿ ಬಿಲ್ಲು ರಿಜಿಸ್ಟರ್.
28.ನಮೂನೆ–14 ಅಂತಿಮ ವೇತನ ಪ್ರಮಾಣ ಪತ್ರ.
29.ಸಾದಿಲ್ವಾರು ಬಿಲ್ಲುಗಳ ವಿವರ.
30.ಕಂಪ್ಯೂಟರ್ ರಿಜಿಸ್ಟರ್.
31.ನಮೂನೆ–34–ಎ ಪೀಠೋಪಕರಣ ವಹಿ.
32.ಅಧಿಕಾರಿ/ ಸಿಬ್ಬಂದಿಯರ ಕಾರ್ಯನಿರ್ವಾಹಣ ವರದಿ ಫೈಲ್.
33.ಸಿಬ್ಬಂದಿಗಳ ಸೇವಾ ಪುಸ್ತಕ ರಿಜಿಸ್ಟರಗಳು.
34.7–ಎ ದೂರವಾಣಿ ರಿಜಿಸ್ಟರ್.
35.ಶುದ್ದ ಪ್ರತಿ ವಹಿ.
36.ಭಾರತ ಸರ್ಕಾರ ಮಾಹಿತಿ ಹಕ್ಕು ನಿಯಮ–2005.
37.ಸರ್ಕಾರ ಸುತ್ತೋಲೆಗಳ ಫೈಲ್.
38.ಲೆಕ್ಕ ತಪಾಸಣೆ ಫೈಲ್.
39.ರಾಷ್ಟ್ರೀಯ ತೋಟಗಾರಿಕೆ ಮಿಷನ್ ನಗದು ಪುಸ್ತಕ ವಹಿ.
40.ರಾಷ್ಟ್ರೀಯ ತೋಟಗಾರಿಕೆ ಮಿಷನ್ ಡಿ.ಸಿ ಬಿಲ್ಲುಗಳ ರಿಜಿಸ್ಟರ್.
41.ರಾಷ್ಟ್ರೀಯ ತೋಟಗಾರಿಕೆ ಮಿಷನ್ ಚೆಕ್ ಗಳನ್ನು ವಿವರಿಸುವ ರಿಜಿಸ್ಟರ್.
42.ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ನಗದು ಪುಸ್ತಕ ವಹಿ.
43.ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಡಿ.ಸಿ ಬಿಲ್ಲುಗಳ ರಿಜಿಸ್ಟರ್.
44.ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಚೆಕ್ ಗಳನ್ನು ವಿವರಿಸುವ ರಿಜಿಸ್ಟರ್.
45.ಸೂಕ್ಷ್ಮ ನೀರಾವರಿ ಯೋಜನೆಯ ನಗದು ಪುಸ್ತಕ ವಹಿ.
46.ಸೂಕ್ಷ್ಮ ನೀರಾವರಿ ಯೋಜನೆಯ ಡಿ.ಸಿ ಬಿಲ್ಲುಗಳ ರಿಜಿಸ್ಟರ್.
47.ಸೂಕ್ಷ್ಮ ನೀರಾವರಿ ಯೋಜನೆಯ ಚೆಕ್‌ಗಳನ್ನು ವಿವರಿಸುವ ರಿಜಿಸ್ಟರ್.

**4(I)**(ಬಿ)–**<u>(VII)</u>** :- **<u>ಪಾಲಿಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂಬಂಧದಲ್ಲಿ ಇರುವ ಏರ್ಪಾಟುಗಳು, ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು</u>**

ಇಲಾಖೆ ಮಾರ್ಗಸೂಚಿ/ಎಂ.ಎಂ.ಆರ್. ಕಾರ್ಯಕ್ರಮಗಳು ಜಿಲ್ಲಾ ಪಂಚಾಯತ ಆದೇಶಗಳ ಅಡಿಯಲ್ಲಿ ಯೋಜನೆಗಳ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು. ಸಾರ್ವಜನಿಕ ಕುಂದುಕೊರತೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ನಿರ್ಧರಿಸಿ ಕ್ರಮ ಕೈಗೊಳ್ಳುವುದು ಹಾಗೂ ಸಚಿವ ಸಂಪುಟ/ಸಂಬಂಧಪಟ್ಟ ಸಚಿವರ ಮಾರ್ಗದರ್ಶನದಲ್ಲಿ ಇಲಾಖೆಯ ನೀತಿ(ಪಾಲಿಸಿ)ಗಳನ್ನು ನಿರ್ಧರಿಸಲಾಗುವುದು. ಅವಶ್ಯಕತೆಗೆ ಅನುಗುಣವಾಗಿ ಸಾರ್ವಜನಿಕರಿಂದ ಬಂದ ಅಭಿಪ್ರಾಯಗಳನ್ನು ಪರಿಶೀಲಿಸಿ ಅಗತ್ಯ ನಿರ್ಧಾರ ತೆಗೆದು ಕೊಳ್ಳಲಾಗುವುದು.

**4(I)**(ಬಿ)–**<u>(VIII)</u>** :- **<u>ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರಿಂದ ರಚಿಸಲ್ಪಡುವ ನಿಗಮ ಕೌನ್ಸಿಲ್ ಬೋರ್ಡ್ಸ್ ಸಮಿತಿ ಅಥವಾ ಇತರ ಬಾಡಿಗಳ ಪಟ್ಟಿ ಹಾಗೂ ಇಂತಹ ಕಮೀಟಿ ಮತ್ತು ಸಮಿತಿಗಳು ನಡೆಸುವ ಸಭೆ ಮತ್ತು ನಡವಳಿಕೆಗಳನ್ನು ಸಾರ್ವಜನಿಕರು ವೀಕ್ಷಿಸಬಹುದೇ ಅಥವಾ ಇಂತಹ ಸಭೆಗಳ ನಡಾವಳಿಗಳನ್ನು ವೀಕ್ಷಿಸಲು ಮುಕ್ತ ಅವಕಾಶವಿದೆಯೇ?</u>**

ತೋಟಗಾರಿಕೆ ಇಲಾಖಾ ಯೋಜನೆಗಳಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆರವರ ಅಧ್ಯಕ್ಷತೆಯಲ್ಲಿ ಎರಡು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ.

1. ಜಿಲ್ಲಾ ಸೂಕ್ಷ್ಮ ನೀರಾವರಿ ಸಮಿತಿ
2. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆ ಜಿಲ್ಲಾ ಸಮಿತಿ

**1. ಜಿಲ್ಲಾ ಸೂಕ್ತ ನೀರಾವರಿ ಸಮಿತಿ:–**

ಕರ್ನಾಟಕ ಸರ್ಕಾರದ ಆದೇಶ ಸಂ:AHD/163/HPP/2007, ದಿನಾಂಕ:27–09–2007 ರ ಆದೇಶದಂತೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಹಾಗೂ ಕೇಂದ್ರ ಪುರಸ್ಕೃತ ಸೂಕ್ಷ್ಮ

**ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ**

ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ಜಿಲ್ಲಾ ಸೂಕ್ಷ್ಮ ನೀರಾವರಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯ ಸ್ವರೂಪವು ಈ ಕೆಳಕಂಡಂತಿರುತ್ತದೆ.

| | | |
|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, (ಜಿಲ್ಲಾ ಪಂಚಾಯತ್), ದಾವಣಗೆರೆ | ಅಧ್ಯಕ್ಷರು |
| 2 | ಜಂಟಿ ಕೃಷಿ ನಿರ್ದೇಶಕರು, (ಜಿಲ್ಲಾ ಪಂಚಾಯತ್), ದಾವಣಗೆರೆ | ಸದಸ್ಯರು |
| 3 | ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ದಾವಣಗೆರೆ | ಸದಸ್ಯರು |
| 4 | ಕೃಷಿ ಸಂಶೋಧನಾ ಕೇಂದ್ರ, ಕತ್ತಲಗೆರೆ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರುರವರ ಪ್ರತಿನಿಧಿ | ಸದಸ್ಯರು |
| 5 | ರೈತರ ಪ್ರತಿನಿಧಿ | ಸದಸ್ಯರು |
| 6 | ಇರಿಗೇಷನ್ ಅಸೋಸಿಯೇಷನ್ ಆಫ್ ಕರ್ನಾಟಕ, ಬೆಂಗಳೂರುರವರ ಪ್ರತಿನಿಧಿ | ಸದಸ್ಯರು |
| 7 | ತೋಟಗಾರಿಕೆ ಉಪನಿರ್ದೇಶಕರು, (ಜಿಲ್ಲಾ ಪಂಚಾಯತ್) ದಾವಣಗೆರೆ | ಸದಸ್ಯ ಕಾರ್ಯದರ್ಶಿ |

ಜಿಲ್ಲಾ ಸೂಕ್ಷ್ಮ ನೀರಾವರಿ ಸಮಿತಿಯು ಕೆಳಕಂಡ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.

1. ಮಾಹಿತಿ ಸಂಗ್ರಹಣೆ
2. ಜಿಲ್ಲೆಗೆ ಅವಶ್ಯವಿರುವ ಕಾರ್ಯಕ್ರಮಗಳನ್ನೊಳಗೊಂಡಂತೆ ಕ್ರಿಯಾ ಯೋಜನೆ ಸಿದ್ದಪಡಿಸುವುದು.
3. ಕಾರ್ಯಕ್ರಮದ ಅನುಷ್ಠಾನಕ್ಕೆ ಬೇಕಾದ ಅವಶ್ಯಕ ನಿರ್ಣಯಗಳನ್ನು ತೆಗೆದುಕೊಂಡು ತೋಟಗಾರಿಕೆ ನಿರ್ದೇಶನಾಲಯದ ಅನುಮೋಧನೆಗೆ ಸಲ್ಲಿಸುವುದು.
4. ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನದ ಬಳಕೆ ಮತ್ತು ಪ್ರಗತಿ ಪರಿಶೀಲನೆ.
5. ಜಿಲ್ಲಾ ಮಟ್ಟದಲ್ಲಿ ವಿವಿಧ ಸಂಘ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಯೋಜನೆಯ ಅನುಷ್ಠಾನಕ್ಕಾಗಿ ಕ್ರಮವಹಿಸುವುದು.

**ಸದಸ್ಯ ಕಾರ್ಯದರ್ಶಿಗಳ ಕರ್ತವ್ಯಗಳು.**

1. ಸದರಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಮಿತಿಯ ಅಧ್ಯಕ್ಷರ ಒಪ್ಪಿಗೆಯ ಮೇರೆಗೆ ಸಭೆಗಳನ್ನು ಕರೆಯತಕ್ಕದ್ದು ಮತ್ತು ಸಭೆಯ ಸಂಪೂರ್ಣ ದಾಖೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ಸಭೆಯ ನಡುವಳಿಗಳನ್ನು ದಾಖಲಿಸಿ ಅಧ್ಯಕ್ಷರ ಅನುಮೋಧನೆ ಪಡೆದು ಸಮಿತಿಯ ಸದಸ್ಯರೆಲ್ಲರಿಗೂ ಮತ್ತು ಮಿಷನ್ ನಿರ್ದೇಶಕರು, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಏಜನ್ಸಿ, ಲಾಲ್‌ಬಾಗ್, ಬೆಂಗಳೂರುರವರಿಗೆ ಪ್ರತಿಯನ್ನು ಸಲ್ಲಿಸುವುದು.
2. ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಹಾಗೂ ಕೇಂದ್ರ ಪುರಸ್ಕೃತ ಸೂಕ್ಷ್ಮ ನೀರಾವರಿ ಯೋಜನೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ನಿರ್ವಹಿಸುವುದು.
3. ಬಿಡುಗಡೆಯಾದ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕ್ (ಎಸ್.ಬಿ.ಎಂ) ನಲ್ಲಿ ಜಮೆ ಮಾಡಿ ಮಾರ್ಗಸೂಚಿಯನ್ವಯ ಅನುದಾನವನ್ನು ಯೋಜನೆಯ ಅನುಷ್ಠಾನಕ್ಕಾಗಿ ಬಳಸುವುದು ಹಾಗೂ ವರ್ಷದ ಅಂತ್ಯದಲ್ಲಿ ಆಡಿಟ್ ಮಾಡಿಸಿ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು.

4. ಸಮಿತಿ ಸಭೆಯಲ್ಲಿ ಕೈಗೊಳ್ಳುವ ತೀರ್ಮಾನ ಹಾಗೂ ಅಭಿಪ್ರಾಯಗಳ ಬಗ್ಗೆ ಹೆಚ್ಚಿನ ಮಾರ್ಗದರ್ಶನ ಅಥವಾ ಅನುಮೋಧನೆಗಾಗಿ ಮಿಷನ್ ನಿರ್ದೇಶಕರು, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಏಜನ್ಸಿ, ಲಾಲ್‌ಬಾಗ್, ಬೆಂಗಳೂರುರವರಿಗೆ ವರದಿ ಮಾಡಿ ಸೂಕ್ತ ಅನುಸರಣಾ ಕ್ರಮ ಕೈಗೊಳ್ಳುವುದು.

**2. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆ ಜಿಲ್ಲಾ ಸಮಿತಿ :-**

ತೋಟಗಾರಿಕೆ ನಿರ್ದೇಶನಾಲಯದ ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರುರವರ ಪತ್ರ ಸಂ:ತೋಇ/ಜಂನಿ/ಜೀವತ/ತಾಸ/25/2008-09/543, ದಿನಾಂಕ:07/15-10-2008ರನ್ವಯ ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯ ಸ್ವರೂಪವು ಈ ಕೆಳಕಂಡಂತಿರುತ್ತದೆ.

| | | |
|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, (ಜಿಲ್ಲಾ ಪಂಚಾಯತ್), ದಾವಣಗೆರೆ | ಅಧ್ಯಕ್ಷರು |
| 2 | ಜಂಟಿ ಕೃಷಿ ನಿರ್ದೇಶಕರು, (ಜಿಲ್ಲಾ ಪಂಚಾಯತ್), ದಾವಣಗೆರೆ | ಸದಸ್ಯರು |
| 3 | ಉಪನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ದಾವಣಗೆರೆ | ಸದಸ್ಯರು |
| 4 | ಸ್ಥಳೀಯ ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿ | ಸದಸ್ಯರು |
| 5 | ಸಂಬಂಧಪಟ್ಟ ಅಭಿವೃದ್ಧಿ ಇಲಾಖೆಗಳಾದ ಅರಣ್ಯ, ಆಯುರ್ವೇದ ಮತ್ತು ಯುನಾನಿ, ಕೃಷಿ ಮಾರುಕಟ್ಟೆ ಇಲಾಖೆಗಳ ಪ್ರತಿನಿಧಿಗಳು | ಸದಸ್ಯರು |
| 6 | ಔಷಧಿ ಬೆಳೆಗಳ ಬೆಳಗಾರರ ಸಂಘದ ಪ್ರತಿನಿಧಿ | ಸದಸ್ಯರು |
| 7 | ಮಾರುಕಟ್ಟೆ ಮಂಡಳಿ ಪ್ರತಿನಿಧಿ | ಸದಸ್ಯರು |
| 8 | ಸ್ವಸಹಾಯ ಸಂಘದ ಪ್ರತಿನಿಧಿ | ಸದಸ್ಯರು |
| 9 | ತೋಟಗಾರಿಕೆ ಉಪನಿರ್ದೇಶಕರು, (ಜಿಲ್ಲಾ ಪಂಚಾಯತ್) ದಾವಣಗೆರೆ | ಸದಸ್ಯ ಕಾರ್ಯದರ್ಶಿ |

48. ಸದರಿ ಸಮಿತಿಯು ಜಿಲ್ಲೆಗೆ ಅಗತ್ಯವಿರುವ ಔಷಧಿ ಬೆಳೆಗಳ ಪ್ರದೇಶ ವಿಸ್ತರಣೆ, ಔಷಧಿ ಗಿಡಗಳ ನರ್ಸರಿ ಸ್ಥಾಪನೆ ಹಾಗೂ ಕೊಯ್ಲೋತ್ತರ ಸಂಸ್ಕರಣೆ ಘಟಕಗಳ ಸ್ಥಾಪನೆಗಳ ಬಗ್ಗೆ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಅನುಮೋಧನೆಗಾಗಿ ತೋಟಗಾರಿಕೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

49. ಅನುಮೋಧನೆಯಾದ ಕ್ರಿಯಾ ಯೋಜನೆಯಂತೆ ಪ್ರಗತಿ ಪರಿಶೀಲನೆ ನಡೆಸುವುದು.

**3. ಕರ್ನಾಟಕ ತೋಟಗಾರಿಕೆ ಅಭಿವೃದ್ಧಿ ಏಜನ್ಸಿ**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ತೋಟಗಾರಿಕೆ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜನ್ಸಿ ಪ್ರಾರಂಭಿಸಲಾಗಿದ್ದು, ಏಜನ್ಸಿಯ ಜಿಲ್ಲಾ ಮಟ್ಟದ ಸಮಿತಿಯ ಸದಸ್ಯರು ಈ ಕೆಳಕಂಡಂತಿರುತ್ತಾರೆ.

ತೋಟಗಾರಿಕೆ ಉಪ ನಿರ್ದೇಶಕರು, (ಜಿ.ಪಂ), ದಾವಣಗೆರೆ – ಅಧ್ಯಕ್ಷರು

ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ದಾವಣಗೆರೆ –ಸದಸ್ಯ ಕಾರ್ಯದರ್ಶಿಗಳು

ತೋಟಗಾರಿಕೆ ಕ್ಷೇತ್ರಗಳ ಅಧಿಕಾರಿಗಳು – ಸದಸ್ಯರು

ಈ ಮೇಲ್ಕಂಡ ಎಲ್ಲಾ ಸಮಿತಿಗಳ ನಡುವಳಿಗಳನ್ನು ವಿಕ್ಷೀಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿರುತ್ತದೆ.

**4(I)(ಬಿ)–(IX) : ತೋಟಗಾರಿಕೆ ಉಪನಿರ್ದೇಶಕರು (ಜಿಲ್ಲಾ ಪಂಚಾಯತ್), ದಾವಣಗೆರೆ ರವರ ಅಧೀನ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ದೂರವಾಗಿ ವಿವರಗಳ ಪಟ್ಟಿ.**

| ಕ್ರ.ಸಂ. | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1) | ತೋಟಗಾರಿಕೆ ಉಪನಿರ್ದೇಶಕರು | ಡಾ॥ ವೇದಮೂರ್ತಿ | 297090 |
| 2) | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇ.ಕ.ಸ) | ಡಾ॥ ಹೆಚ್.ಎನ್. ಶಶಿಧರಸ್ವಾಮಿ | 297090 |
| 3) | ಸಹಾಯಕ ತೋಟಗಾರಿಕೆ ನಿರ್ದೇಶಕರು (ಮಾರುಕಟ್ಟೆ) | ಡಾ॥ ಎನ್. ಕುಮಾರ್ | 297090 |
| 4) | ಸಹಾಯಕ ತೋಟಗಾರಿಕೆ ಅಧಿಕಾರಿ | ಡಾ॥ ಜಿ.ಎಂ.ವಿಶ್ವೇಶ್ವರಯ್ಯ | 297090 |
| 5) | ಸಹಾಯಕ ತೋಟಗಾರಿಕೆ ಅಧಿಕಾರಿ | ಡಾ॥ ಶ್ರೀಮತಿ ಶೃತಿ. ನಾಯ್ಕ | 297090 |
| 6) | ಅಧೀಕ್ಷಕರು | ಹೆಚ್. ಅಶೋಕರೆಡ್ಡಿ | 297090 |
| 7) | ಪ್ರಥಮ ದರ್ಜೆ ಸಹಾಯಕರು | ಎ.ಕೆ. ಶಿವರಾಂ | 297090 |
| 8) | ದ್ವಿತೀಯ ದರ್ಜೆ ಸಹಾಯಕರು | ಹೆಚ್.ಕೆ. ಯಶವಂತಕುಮಾರ | 297090 |
| 9) | ಬೆರಳಚ್ಚುಗಾರರು | ಖಾಲಿ ಹುದ್ದೆ | – |

| | | | |
|---|---|---|---|
| 10) | ವಾಹನ ಚಾಲಕರು | ಖಾಲಿ ಹುದ್ದೆ | – |
| 11) | ಸೇವಕರು | ಖಾಲಿ ಹುದ್ದೆ | – |

**4(I)(ಬಿ)–(X) : ತೋಟಗಾರಿಕೆ ಉಪನಿರ್ದೇಶಕರು (ಜಿಲ್ಲಾ ಪಂಚಾಯತ್), ದಾವಣಗೆರೆ ರವರ ಅಧೀನ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಅಕ್ಟೋಬರ್–2009 ರ ಮಾಹೆಯ ವೇತನದ ವಿವರಗಳ ಪಟ್ಟಿ.**

| ಕ್ರ.ಸಂ. | ಹುದ್ದೆ | ಹೆಸರು | ವೇತನ |
|---|---|---|---|
| • | ತೋಟಗಾರಿಕೆ ಉಪನಿರ್ದೇಶಕರು | ಡಾ|| ವೇದಮೂರ್ತಿ | 38100.00 |
| • | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇ.ಕ.ಸ) | ಡಾ|| ಹೆಚ್.ಎನ್. ಶಶಿಧರಸ್ವಾಮಿ | 34500.00 |
| • | ಸಹಾಯಕ ತೋಟಗಾರಿಕೆ ನಿರ್ದೇಶಕರು (ಮಾರುಕಟ್ಟೆ) | ಡಾ|| ಎನ್. ಕುಮಾರ್ | 34500.00 |
| • | ಸಹಾಯಕ ತೋಟಗಾರಿಕೆ ಅಧಿಕಾರಿ | ಡಾ|| ಜಿ.ಎಂ.ವಿಶ್ವೇಶ್ವರಯ್ಯ | 26700.00 |
| • | ಸಹಾಯಕ ತೋಟಗಾರಿಕೆ ಅಧಿಕಾರಿ | ಡಾ|| ಶ್ರೀಮತಿ ಶೃತಿ. ನಾಯ್ಕ | 25300.00 |
| • | ಅಧೀಕ್ಷಕರು | ಹೆಚ್. ಅಶೋಕರೆಡ್ಡಿ | 25300.00 |
| • | ಪ್ರಥಮ ದರ್ಜೆ ಸಹಾಯಕರು | ಎ.ಕೆ. ಶಿವರಾಂ | 18550.00 |
| • | ದ್ವಿತೀಯ ದರ್ಜೆ ಸಹಾಯಕರು | ಖಾಲಿ ಹುದ್ದೆ | – |
| • | ಬೆರಳಚ್ಚುಗಾರರು | ಖಾಲಿ ಹುದ್ದೆ | – |
| • | ವಾಹನ ಚಾಲಕರು | ಖಾಲಿ ಹುದ್ದೆ | – |
| • | ಸೇವಕರು | ಖಾಲಿ ಹುದ್ದೆ | – |

## 4(I)(ಬಿ)–(XI) : ಆಯವ್ಯಯ ವಿತರಣೆ:–2016–17 (Budget Allocation)

| ಕ್ರ. ಸಂ. | ಯೋಜನೆ/ಯೋಜನೇತರ | ವಾರ್ಷಿಕ ಗುರಿ (ಲಕ್ಷ) |
|---|---|---|
| **I** | **ಜಿಲ್ಲಾ ಮತ್ತು ತಾಲ್ಲೂಕುವಲಯ ಯೋಜನೆಗಳು** | |
| 1. | ತೋಟಗಾರಿಕೆ ಬೆಳೆಗಳ ವಿಶೇಷ ಹನಿ ನೀರಾವರಿ ಸಹಾಯಧನ | 65.00 |
| 2. | ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ, | 4.00 |
| 3. | ಪ್ರಚಾರ ಮತ್ತು ಸಾಹಿತ್ಯ | 2.00 |
| 4. | ತೋಟಗಾರಿಕೆ ಕ್ಷೇತ್ರ:ನರ್ಸರಿಗಳ ನಿರ್ವಹಣೆ ಮತ್ತು ಮೂಲ ಸೌಕರ್ಯದ ಅಭಿವೃದ್ಧಿ | 6.00 |
| 5. | ತೋಟಗಾರಿಕೆ ಕಟ್ಟಡಗಳು | 15.00 |
| 6. | ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ | 4.00 |
| 7. | **ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು** | – |
| 8. | ರೈತರಿಗಾಗಿ ತರಬೇತಿ | 1.00 |
| 9. | ರೈತರಿಗೆ ಸಹಾಯ, | 8.00 |
| 10. | ಗಿರಿಜನ ಉಪ ಂಯೋಜನೆ (ರಾಜ್ಯ) | 2.21 |
| 11. | ವಿಶೇಷ ಘಟಕ ಯೋಜನೆ (ರಾಜ್ಯ) | 4.30 |
| | **ಒಟ್ಟು** | **111.51** |
| **II** | **ರಾಜ್ಯವಲಯ ಯೋಜನೆಗಳು** | |
| 1. | ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆ | 16.00 |
| 2. | ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ | 16.80 |
| 3. | ತೋಟಗಾರಿಕೆ ಕಟ್ಟಡಗಳು | 10.00 |

| | | |
|---|---|---|
| 4. | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | 2.34 |
| 5. | ತರಕಾರಿ ಮಾದರಿ ಬೀಜ ಸಂಗ್ರಹಣೆ ಯೋಜನೆ | 0.60 |
| 6. | ನಿರ್ದೇಶನ ಮತ್ತು ಆಡಳಿತ | 2.13 |
| 7. | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ | 588.16 |
| 8. | ತೋಟಗಳು ಮತ್ತು ಉದ್ಯಾನವನಗಳು | 1875.00 |
| | **ಒಟ್ಟು** | **2526.07** |
| **III** | **ಕೇಂದ್ರ ವಲಯ ಯೋಜನೆಗಳು** | |
| 1 | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ | 781.69 |
| 2 | ಕೇಂದ್ರ ಪುರಸ್ಕೃತ ಸೂಕ್ಷ್ಮ ನೀರಾವರಿ ಯೋಜನೆ | 1157.63 |
| 3 | ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆ | 0.00 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 288.82 |
| 5 | ತೆಂಗು ಅಭಿವೃದ್ಧಿ ಮಂಡಳಿ ಅನುದಾನಿತ ತೆಂಗು ಉತ್ಪಾದಕತೆ ಅಭಿವೃದ್ಧಿಗಾಗಿ ಸಮಗ್ರ ತೆಂಗು ಬೇಸಾಯ ಯೋಜನೆ | 12.43 |
| | **ಒಟ್ಟು** | **2240.57** |
| **IV** | **ಯೋಜನೇತರ ಆಯವ್ಯಯ ವಿತರಣೆ** | **84.37** |

4(I)(ಬಿ)–(XII) : **ಸಹಾಯಧನದೊಂದಿಗೆ ನಡೆಸುವ ಯೋಜನೆಗಳು ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮಂಜೂರಾದ ಹಣ.**

| **ಕ್ರ.ಸಂ.** | **ಯೋಜನೆ ವಿವರ** | ಮಂಜೂರಾದ ಹಣ (ಲಕ್ಷಗಳಲ್ಲಿ) | ಯೋಜನೆಯಡಿ ದೊರೆಯುವ ಸಹಾಯಧನ/ಸವಲತ್ತು |
|---|---|---|---|
| 1 | ತೋಟಗಾರಿಕೆ ಬೆಳೆಗಳ ವಿಶೇಷ ಹನಿ ನೀರಾವರಿ ಸಹಾಯಧನ | 65.00 | ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡ ಫಲಾನುಭವಿಗಳಿಗೆ ಶೇ.90ರಂತೆ ಗರಿಷ್ಠ 2 ಹೆಕ್ಟೇರ್ ಹಾಗೂ 2 ಕ್ಕಿಂತ ಮೇಲ್ಪಟ್ಟು 5 ಹೆಕ್ಟೇರ್‌ವರೆಗೂ ಶೇ.35/45 ರಂತೆ ಯೋಜನೆಯ ನಿಯಮ ಹಾಗೂ ಜೇಷ್ಠತೆಯನುಸಾರ ಸಹಾಯಧನವನ್ನು ಫಲಾಭವಿಗಳ ಖಾತೆಗೆ ಜಮಾ ಮಾಡಲಾಗುವುದು. |
| 2 | ಪ್ರಚಾರ ಮತ್ತು ಸಾಹಿತ್ಯ | 2.00 | ತೋಟಗಾರಿಕೆ ಬೆಳೆಗಳ ಕೃಷಿ ರೋಗ/ಕೀಟಗಳ ನಿಯಂತ್ರಣ ಕರಪತ್ರ/ಕೈಪಿಡಿಗಳನ್ನು ಮುದ್ರಿಸಿ ಉಚಿತವಾಗಿ ರೈತರಿಗೆ ವಿತರಿಸಲಾಗುವುದು. |
| 3 | ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ | 4.00 | ತಾಳೆ ಬೆಳೆಗಾರರಿಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ, ಕೊಳವೆ ಬಾವಿ ಕೊರಸಿಕೊಂಡವರಿಗೆ ಕೇಸಿಂಗ್ ಪೈಪ್, ಸಬ್‌ಮರ್ಸಿಬಲ್ ಪಂಪ್, ಜಿ.ಐ.ಪೈಪ್, ಪ್ಯಾನಲ್ ಬೋರ್ಡ್‌ಗಳ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಠ ರೂ.25000/–ದ ವರೆಗೆ ಸಹಾಯಧನ, ತಾಳೆ ಫಸಲು ಕಟಾವು ಉಪಕರಣ ಖರೀದಿ ಮತ್ತು ಕಳೆ ಕತ್ತರಿಸುವ ಯಂತ್ರಕ್ಕೆ ಸಹಾಯಧನ ವಿತರಣೆ ಹಾಗೂ ಪ್ರಾತ್ಯಕ್ಷತೆ ತಾಕು ನಿರ್ವಹಣೆಗಾಗಿ ಸಹಾಯಧನ ವಿತರಿಸಲಾಗುವುದು. |
| | ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು | | |
| 1 | D-07 ರೈತರಿಗಾಗಿ ತರಬೇತಿ | 1.00 | ಆಯ್ದ ರೈತ ಮಹಿಳೆಯರಿಗೆ ತೋಟಗಾರಿಕೆ ಹಣ್ಣುಗಳ ಹಾಗೂ ತರಕಾರಿಗಳ ಶೇಖರಣೆ ಮತ್ತು ಸಂಸ್ಕರಣೆ ಬಗ್ಗೆ ಎರಡು ದಿನಗಳ ತರಬೇತಿ ನೀಡಲಾಗುವುದು. |

| | | | |
|---|---|---|---|
| 2 | ರೈತರಿಗೆ ಸಹಾಯ | 8.00 | ಆಯ್ದ ಫಲಾನುಭವಿಗೆ ರೂ.1000/- ಮೊತ್ತಕ್ಕೆ ತೆಂಗಿನ ಸಸಿಗಳು ಹಣ್ಣಿನ ಕಸಿ/ಸಸಿಗಳನ್ನು ಉಚಿತವಾಗಿ ವಿತರಣೆ ಮಾಡಲಾಗುವುದು. |
| 3 | ಗಿರಿಜನ ಉಪ ಯೋಜನೆ (ರಾಜ್ಯ) | 2.21 | ಪರಿಶಿಷ್ಟ ಪಂಗಡದ ಫಲಾನುವಿಗಳನ್ನು ಗುಚ್ಛ ಗ್ರಾಮಗಳಲ್ಲಿ ಆಯ್ಕೆ ಮಾಡಿ ಅರ್ಧ ಎಕರೆ ತೆಂಗಿನ ತೋಟ ಮಾಡಿಕೊಳ್ಳಲು ಬೇಕಾದ ತೆಂಗಿನ ಸಸಿ, ಉಪಕರಣ, ಸಸ್ಯ ಸಂರಕ್ಷಣ ಔಷಧಿ ಹಾಗೂ ಬೇಸಾಯದ ಖರ್ಚನ್ನು ನೀಡಲಾಗುವುದು. ಅಥವಾ ತರಕಾರಿ ಬೀಜ ವಿತರಣೆ/ತುಂತುರು ನೀರಾವರಿ ಘಟಕ ವಿತರಣೆ/ ಶೇ.75 ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆಯ ಯಂತ್ರೋಪಕರಣಗಳ ವಿತರಣೆ ಮಾಡಲಾಗುವುದು. ಆಯಾಯಾ ಕಾರ್ಯಕ್ರಮ ಗಳನ್ವಯ ಅನುಮೋಧಿತ ಘಟಕ ವೆಚ್ಚ ಮಿತಿಯಲ್ಲಿ ಸವಲತ್ತು ನೆಡುವುದು. |
| 4 | ವಿಶೇಷ ಘಟಕ ಯೋಜನೆ (ರಾಜ್ಯ) | 4.30 | ಪರಿಶಿಷ್ಟ ಜಾತಿ ಫಲಾನುವಿಗಳನ್ನು ಗುಚ್ಛ ಗ್ರಾಮಗಳಲ್ಲಿ ಆಯ್ಕೆ ಮಾಡಿ ಅರ್ಧ ಎಕರೆ ತೆಂಗಿನ ತೋಟ ಮಾಡಿಕೊಳ್ಳಲು ಬೇಕಾದ ತೆಂಗಿನ ಸಸಿ, ಉಪಕರಣ, ಸಸ್ಯ ಸಂರಕ್ಷಣ ಔಷಧಿ ಹಾಗೂ ಬೇಸಾಯದ ಖರ್ಚನ್ನು ನೀಡಲಾಗುವುದು. ಅಥವಾ ತರಕಾರಿ ಬೀಜ ವಿತರಣೆ/ತುಂತುರು ನೀರಾವರಿ ಘಟಕ ವಿತರಣೆ/ ಶೇ.75 ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆಯ ಯಂತ್ರೋಪಕರಣಗಳ ವಿತರಣೆ ಮಾಡಲಾಗುವುದು. ಆಯಾಯಾ ಕಾರ್ಯಕ್ರಮ ಗಳನ್ವಯ ಅನುಮೋಧಿತ ಘಟಕ ವೆಚ್ಚ ಮಿತಿಯಲ್ಲಿ ಸವಲತ್ತು ನೆಡುವುದು. |
| | **ಒಟ್ಟು ಮೊತ್ತ (ಜಿ.ಪಂ+ತಾ.ಪಂ)** | **86.51** | |
| | **ರಾಜ್ಯವಲಯ ಯೋಜನೆಗಳು** | | |
| 1 | ಸಮಗ್ರ ತೋಟಗಾರಿಕೆ ಅಭಿವೃದ್ದಿ ಯೋಜನೆ | 588.16 | ಹೊಸ ಪ್ರದೇಶ ವಿಸ್ತರಣೆ, ಪ್ಯಾಕ್ ಹೌಸ್, ಕೃಷಿ ಹೊಂಡ, ತರಬೇತಿ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಕೈತೋಟ ಮತ್ತು ತಾರಸಿ ತೋಟ, ತೋಟಗಾರಿಕೆ ವಿಸ್ತರಣೆ, ಫಲಪುಷ್ಪ ಪ್ರದರ್ಶನ ಮತ್ತು ವಿವಿಧ ಕೇಂದ್ರ ಯೋಜನೆಗಳಲ್ಲಿ ಶೇ50ರ ಸಹಾಯಧನ ನೀಡಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ40ರ ಮ್ಯಾಚಿಂಗ್ ಗ್ರ್ಯಾಂಟ್ಸ್ ಒದಗಿಸುವುದು |
| 2 | ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ | 16.80 | ತೆಂಗಿನ ಕಪ್ಪುತಲೆ ಹುಳು ಬಾದೆ ನಿಯಂತ್ರಣಕ್ಕಾಗಿ ಇಲಾಖೆಯ ಪ್ರಯೋಗ ಶಾಲೆಯಲ್ಲಿ ಪರೋಪ ಜೀವಿಗಳನ್ನು ಉತ್ಪಾದಿಸಿ ರೈತರಿಗೆ ಉಚಿತವಾಗಿ ವಿತರಿಸುವುದು ಹಾಗೂ ಸಸ್ಯ ಸಂರಕ್ಷಣೆ ಔಷಧಿಗಳನ್ನು ಕೃಷಿ/ತೋಟಗಾರಿಕೆ ಇಲಾಖೆವತಿಯಿಂದ ಅನುಮೋಧನೆಯಾಗಿರುವ/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಖರೀದಿಸಿ ಶೇ.50 ರ ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸುವ ಮೂಲಕ ರೋಗ/ಕೀಟ ನಿರ್ವಹಣೆಗೆ ನೆರವು ಮಾಡಲಾಗುವುದು. |
| 3 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ದಿ | 2.34 | ಜೇನುಪೆಟ್ಟಿಗೆ ಮತ್ತು ಜೇನು ಕುಟುಂಬಗಳನ್ನು ಖರೀದಿಸಿದ ಫಲಾನುಭವಿಗಳಿಗೆ ಸಹಾಯಧನ ಒದಗಿಸುವುದು |
| | **ಒಟ್ಟು** | **607.30** | |

## ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವಿವರ-2016-17

| ಕ್ರ.ಸಂ. | ಯೋಜನೆ ವಿವರ | ಆರ್ಥಿಕ ಗುರಿ (ಲಕ್ಷಗಳಲ್ಲಿ) | ಯೋಜನೆಯಡಿ ದೊರೆಯುವ ಸಹಾಯಧನ/ಸವಲತ್ತು |
|---|---|---|---|
| 1 | **High tech Nursery (spill over)** | 35.16 | ವಿವಿಧ ತೋಟಗಾರಿಕೆ ಬೆಳೆಗಳ ಸಸಿ/ಕಸಿ ಉತ್ಪಾದನೆಗೆ ನರ್ಸರಿ ಸ್ಥಾಪನೆಗೆ ಸಹಾಯಧನ |
| 2 | **ಪ್ರದೇಶ ವಿಸ್ತರಣೆ** | 42.02 | ವಿವಿಧ ತೋಟಗಾರಿಕೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆಗೆ ಸಹಾಯಧನ |
| 3 | **ನಿರ್ವಹಣೆ** | 27.49 | ವಿವಿಧ ತೋಟಗಾರಿಕೆ ಬೆಳೆಗಳ ನಿರ್ವಹಣೆಗೆ ಸಹಾಯಧನ |
| **4** | **ಮಾವು ಪುನಶ್ಚೇತನ** | **2.40** | **ಮಾವು ಪುನಶ್ಚೇತನಕ್ಕೆ ಸಹಾಯಧನ ಒದಗಿಸುವುದು** |
| **5** | **ನೀರು ಸಂಗ್ರಹಣೆ** | **61.75** | **ಕೃಷಿ ಹೊಂಡ ಮತ್ತು ಸಮುದಾಯ ಕೆರೆ ನಿರ್ಮಾಣಕ್ಕೆ ಸಹಾಯಧನ ಒದಗಿಸುವುದು** |

| | | | |
|---|---|---|---|
| 6 | ಸಂರಕ್ಷಿತ ಬೇಸಾಯ | 170.69 | ಪ್ಲಾಸ್ಟಿಕ್ ಹೊದಿಕೆ, ಪಕ್ಷಿ ನಿರೋಧಕ ಬಲೆ ಅಳವಡಿಕೆ, ಪಾಲಿಮನೆ ಮತ್ತು ನೆರಳುಪರದೆ ನಿರ್ಮಾಣಕ್ಕೆ ಸಹಾಯಧನ ಒದಗಿಸುವುದು |
| 7 | ಸಮಗ್ರ ಪೋಷಕಾಂಶ ಮತ್ತು ಪೀಡೆ ನಿರ್ವಹಣೆ | 14.40 | ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆಗಾಗಿ ಲಘು ಪೋಷಕಂಢಗಳನ್ನು ಶೇ.50ರ ದರದಲ್ಲಿ ಪೋಷಕಾಂಶಗಳನ್ನು (ಪ್ರತಿ ಫಲಾನುಭವಿಗೆ ಗರಿಷ್ಠ ರೂ.1000/–)ವಿತರಣೆ ಮಾಡುವುದು. |
| 8 | **ತೋಟಗಾರಿಕೆಯಲ್ಲಿ ಯಾಂತ್ರೀಕರಣ** | **7.75** | **20 ಅಶ್ವ ಶಕ್ತಿಗಿಂತ ಕಡಿಮೆ ಸಾಮರ್ಥ್ಯವುಳ್ಳ ಟ್ರ್ಯಾಕ್ಟರ್ ಖರೀದಿ ಮಾಡಿದ ಫಲಾನುಭವಿಗಳಿಗೆ ರೂ75000 ಸಹಾಯಧನೊದಗಿಸುವುದು** |
| 9 | ಸಾವಯವ ಪರಿವರ್ತನೆ ಅಳವಡಿಕೆ (2ನೇ ವರ್ಷ) | 3.00 | ಸದರಿ ಯೋಜನೆಯನ್ನು ಭಾರತ ಸರ್ಕಾರದಿಂದ ಅನುಮೋದಿಸಲಾದ ಸೇವಾ ನೆರವಿಗರ ಸಹಾಯದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ರಾಸಾಯನಿಕಗಳನ್ನು ಬಳಸದೇ ಪೂರ್ಣ ಸಾವಯವ ಕೃಷಿ ಅಳವಡಿಸಿಕೊಂಡ ರೈತರಿಗೆ ಮೂರು ವರ್ಷಗಳ ಅವಧಿಯಲ್ಲಿ ಸಹಾಯಧನ ನೀಡಲಾಗುವುದು. |
| 10 | ಎರೆಹುಳು ಗೊಬ್ಬರ ಘಟಕ/ಬಯೋಡೈಜೆಸ್ಟಾರ್ (ರೂ.30000/ಘಟಕ) | 5.70 | ಸದರಿ ಯೋಜನೆಯಡಿ ಎರೆಹುಳು ಗೊಬ್ಬರ ಘಟಕ (20 x 4 x 2 ಅಡಿ ಉದ್ದ, ಅಗಲ, ಎತ್ತರ ವಿಸ್ತೀರ್ಣದ) 8 ಸಿಮೆಂಟ್ ತೊಟ್ಟಿಗಳನ್ನು ನಿರ್ಮಿಸಿ ಖಾಯಂ ಮೇಲ್ಚಾವಣಿಯನ್ನು ಅಳವಡಿಸಿಕೊಂಡು ಎರೆಹುಳು ಗೊಬ್ಬರ ತಯಾರಿಸುವ ಫಲಾನುಭವಿಗಳಿಗೆ ಶೇ.50% ಸಹಾಯಧನದಂತೆ ಗರಿಷ್ಠ ರೂ.30,000/– ಮಿತಿಗೊಳಪಟ್ಟು ವಿತರಿಸುವುದು. |
| 11 | ಮಾವನ ಸಂಪನ್ಮೂಲ ಅಭಿವೃದ್ಧಿಯಡಿ ಒಳ ರಾಜ್ಯ ರೈತರ ಪ್ರವಾಸ, ರೈತರಿಗೆ ಹೊರ ರಾಜ್ಯ ಪ್ರವಾಸ ಮತ್ತು ಅಧಿಕಾರಿಗಳಿಗೆ ಪ್ರವಾಸ | 4.79 | ಪ್ರತಿ ರೈತರಿಗೆ ರೂ.1500/–ರಂತೆ 5 ದಿನಗಳ ರಾಜ್ಯ ಒಳಭಾಗದಲ್ಲಿ ಪ್ರವಾಸ ಕಾರ್ಯಕ್ರಮವಿದ್ದು, ನೂತನ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಪ್ರತಿ ರೈತರಿಗೆ ರೂ.2500/–ರಂತೆ 7 ದಿನಗಳ ಹೊರ ರಾಜ್ಯ ಪ್ರವಾಸ ಕಾರ್ಯಕ್ರಮವಿದ್ದು, ನೂತನ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. |
| 12 | ಕೊಯ್ಲೋತ್ತರ ನಿರ್ವಹಣೆ | 297.89 | ಪ್ಯಾಕ್ ಹೌಸ್ ಮತ್ತು ಪ್ರಾಥಮಿಕ ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಸಹಾಯಧನ ನೀಡುವುದು |
| 13 | ತಳ್ಳುಗಾಡಿಗಳ ಖರೀದಿಗೆ ಸಹಾಯಧನ | 7.95 | ತಳ್ಳುಗಾಡಿಗಳ ಖರೀದಿಗೆ ಸಹಾಯಧನ |
| 14 | ರೈತ ಉತ್ಪಾದಕರ ಸಂಸ್ಥೆಗಳ ಬಲವರ್ಧನೆ | 34.51 | ರೈತ ಉತ್ಪಾದಕರ ಸಂಸ್ಥೆಗಳ ಬಲವರ್ಧನೆ |
| 15 | ಪ್ರಚಾರ ಮತ್ತು ಸಾಹಿತ್ಯ | 2.00 | ಪ್ರಚಾರ ಮತ್ತು ಫಲಪುಷ್ಪ ಪ್ರದರ್ಶನ ಆಯೋಜನೆ |
| 16 | ಪ್ಲಾಸ್ಟಿಕ್ ಕ್ರೇಟ್ಸ್ | 0.6250 | ಹಣ್ಣು ಮತ್ತು ತರಕಾರಿಗಳ ಸುರಕ್ಷಿತ ಸಾಗಾಣಿಕೆಗೆ ಅಗತ್ಯವಿರುವ ಪ್ಲಾಸ್ಟಿಕ್ ಕ್ರೇಟ್ಸ್‌ಗಳನ್ನು ಶೇ.25ರ ಸಹಾಯಧನದಲ್ಲಿ ವಿತರಿಸಲಾಗುವುದು. ಇದು ಪ್ರಸ್ತಾವನೆ ಆಧಾರಿತ ಕಾರ್ಯಕ್ರಮವಾಗಿರುತ್ತದೆ. |
| 17 | ಮಿಷನ್ ವೆಚ್ಚ | 27.52 | |
| | **ಒಟ್ಟು** | **745.45** | |
| | **ಬಿಡುಗಡೆಯಾದ ಅನುದಾನ** | **746.04** | |

ಮೇಲ್ಕಂಡ ಸಹಾಯಧನದೊಂದಿಗೆ ನಡೆಸುವ/ಫಲಾನುಭವಿ ಆಧಾರಿತ ಯೋಜನೆಗಳನ್ನು ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಅನುಷ್ಠಾನಗೊಳಿಸುತ್ತಿದ್ದು, ಫಲಾನುಭವಿಗಳ ವಿವರ ಮತ್ತು ಸಹಾಯಧನ ವಿತರಿಸಿರುವ ಬಗ್ಗೆ ಎಲ್ಲಾ ದಾಖಲೆ/ರಿಜಿಸ್ಟರ್‌ಗಳನ್ನು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ನಿರ್ವಹಿಸಲಾಗುತ್ತಿದೆ.

## ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ (ಜಿಲ್ಲಾ ಪಂಚಾಯತ್)ದಾವಣಗೆರೆ, ಜಿಲ್ಲೆ: ದಾವಣಗೆರೆ

### ಕೇಂದ್ರ ಪುರಸ್ಕೃತ ಹನಿ ನೀರಾವರಿ ಯೋಜನೆಯ ವಿವರ–2016–17

| ಕ್ರ.ಸಂ. | ಯೋಜನೆ ವಿವರ | ಆರ್ಥಿಕ ಗುರಿ (ಲಕ್ಷಗಳಲ್ಲಿ) | ಯೋಜನೆಯಡಿ ದೊರೆಯುವ ಸಹಾಯಧನ/ಸವಲತ್ತು |
|---|---|---|---|
| 1 | ಹನಿ ನೀರಾವರಿ ಯೋಜನೆ (ಡಿ–01 ಮತ್ತು ಎಸ್–03 ಒಳಗೊಂಡಂತೆ) | 1181.62 | ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡ ಫಲಾನುಭವಿಗಳಿಗೆ ಶೇ.90ರಂತೆ ಗರಿಷ್ಠ 2 ಹೆಕ್ಟೇರ್ ಹಾಗೂ 2 ಕ್ಕಿಂತ ಮೇಲ್ಪಟ್ಟು 5 ಹೆಕ್ಟೇರ್‌ವರೆಗೂ ಶೇ.50 ರಂತೆ ಯೋಜನೆಯ ನಿಯಮ ಹಾಗೂ ಜೇಷ್ಠತೆಯನುಸಾರ ಸಹಾಯಧನವನ್ನು ಫಲಾಭವಿಗಳ ಖಾತೆಗೆ ಜಮಾ ಮಾಡಲಾಗುವುದು. |
| | ಬಿಡುಗಡೆಯಾದ ಅನುದಾನ | 1182.63 | |

ಮೇಲ್ಕಂಡ ಸಹಾಯಧನದೊಂದಿಗೆ ನಡೆಸುವ/ಫಲಾನುಭವಿ ಆಧಾರಿತ ಯೋಜನೆಗಳನ್ನು ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಅನುಷ್ಠಾನಗೊಳಿಸುತ್ತಿದ್ದು, ಫಲಾನುಭವಿಗಳ ವಿವರ ಮತ್ತು ಸಹಾಯಧನ ವಿತರಿಸಿರುವ ಬಗ್ಗೆ ಎಲ್ಲಾ ದಾಖಲೆ/ರಿಜಿಸ್ಟರ್‌ಗಳನ್ನು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ನಿರ್ವಹಿಸಲಾಗುತ್ತಿದೆ.

**4 (I) (ಬಿ) (XIII) : ಇಲಾಖೆಯಿಂದ ಆಥೋರೈಸೇಷನ್ ಮಂಜೂರಾದ ಅಥವಾ ಪರವಾನಿಗಿ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯಂಟ್ಸ್ ವಿವರಗಳು.**

ಇಂತಹ ವಿಷಯಗಳನ್ನು ತಾಲೂಕ ಮಟ್ಟದ ಕಛೇರಿಗಳಲ್ಲಿ ನಿರ್ವಹಿಸಲಾಗುತ್ತದೆ.

**4 (I) (ಬಿ) (XIV) : ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿಯ ವಿವರ ದೊರಕುವಿಕೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.**

ಇಲಾಖಾ ಯೋಜನೆಗಳ ವಾರ್ಷಿಕ ಪ್ರಗತಿ ವರದಿ (2004–05ನೇ ಸಾಲಿನಿಂದ)

**4(I) (ಬಿ) (XV) :ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶಗಳ ವಿವರಗಳು, ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು, ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದಾರೆಯೇ?**

ಗ್ರಂಥಾಲಯ ಅಥವಾ ಓದುವ ಕೊಠಡಿ ಸದರಿ ಕಛೇರಿಯಲ್ಲಿ ಇರುವುದಿಲ್ಲ. ಆದರೆ ಸಾರ್ವಜನಿಕರಿಗೆ/ರೈತರಿಗೆ ಅಗತ್ಯವಿರುವ ತಾಂತ್ರಿಕ ಮಾಹಿತಿಯನ್ನು ಕೇಳಿದಾಗ ತಾಂತ್ರಿಕ ಶಾಖೆಯ ಸಿಬ್ಬಂದಿಯವರು ಮಾಹಿತಿ ತಿಳಿಸುತ್ತಾರೆ.

ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯ ಹಾಗೂ ಓದುವ ಕೊಠಡಿಯನ್ನು ಲಾಲ್‌ಬಾಗ್, ಬೆಂಗಳೂರಿನಲ್ಲಿರುವ ತೋಟಗಾರಿಕೆ ನಿರ್ದೇಶನಾಲಯವು ಹೊಂದಿರುತ್ತದೆ. ಇದರಲ್ಲಿ ದಿನಪತ್ರಿಕೆ, ನಿಯತಕಾಲಿಕೆಗಳು, ಮಾಸಿಕ ಪತ್ರಿಕೆಗಳು ಹಾಗೂ ಇಲಾಖೆಯ ಚಟುವಟಿಕೆಗೆ ಸಂಬಂಧಿಸಿದಂತೆ ಕೈಪಿಡಿ, ಪುಸ್ತಕಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಲಭ್ಯವಿದ್ದು, ಗ್ರಂಥಾಲಯವು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ತೆರೆದಿರುತ್ತದೆ.

**4(I)(ಬಿ) (XVI) :ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಪದನಾಮ ಮತ್ತು ಇತರೆ ವಿವರಗಳು.**

**ಶ್ರೀ.ಹೆಚ್.ಎನ್. ಶಶಿಧರಸ್ವಾಮಿ**

ಕೇಂದ್ರ ಕಛೇರಿ ಸಹಾಯಕರು/ಸಹಾಯಕ ತೋಟಗಾರಿಕೆ ನಿರ್ದೇಶಕರು,

ತೋಟಗಾರಿಕೆ ಉಪನಿರ್ದೇಶಕರ ಕಛೇರಿ,

(ಜಿಲ್ಲಾ ಪಂಚಾಯತ್),

ದಾವಣಗೆರೆ–577006

ದೂರವಾಣಿ ಸಂಖ್ಯೆ: 08192–297090

**ಮೇಲ್ಮನವಿ ಪ್ರಾಧಿಕಾರ**

**ಶ್ರೀ ಟಿ.ಆರ್. ವೇದಮೂರ್ತಿ**

ತೋಟಗಾರಿಕೆ ಉಪ ನಿರ್ದೇಶಕರು,

ತೋಟಗಾರಿಕೆ ಉಪನಿರ್ದೇಶಕರ (ಜಿಲ್ಲಾಪಂಚಾಯತ್),

**4(I)(ಬಿ) (XVII) : ನಿಗಧಿಪಡಿಸಲಾದ ಇತರೆ ವಿಷಯಗಳು**

**ಯಾವುದು ಇಲ್ಲ**